ಕುಶಾಲನಗರ ಯೋಜನಾ ಪ್ರಾಧಿಕಾರ, ಕುಶಾಲನಗರ

ಕಾವೇರಿ ಬಡಾವಣೆ, ಸಂ.05, ಬ್ಲಾಕ್ ನಂ.01, ಕುಶಾಲನಗರ – 571 234

Email Id: kushalnagaradtp@hotmail.com **ದೂರವಾಣಿ ಸಂ: 08276–274040**

ಕುಶಾಲನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ನರ್ವಡೆ ವಿನಾಯಕ್ ಕಾರ್ಭಾರಿ, ಉಪವಿಭಾಗಾಧಿಕಾರಿಗಳು, ಮಡಿಕೇರಿ ಉಪವಿಭಾಗ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 12–03–2024 ರ ಮಂಗಳವಾರದಂದು ಪೂರ್ವಾಹ್ನ 10.30 ಗಂಟೆಗೆ ನಡೆದ ಪ್ರಾಧಿಕಾರದ 60 ನೇ ಸಾಮಾನ್ಯ ಸಭೆಯ ನಡಾವಳಿ

ಸಭೆಯಲ್ಲಿ ಹಾಜರಿದ್ದವರು :–

1. ಅಧ್ಯಕ್ಷರು
2. ಸದಸ್ಯ ಕಾರ್ಯದರ್ಶಿ, ಕುಶಾಲನಗರ ಯೋಜನಾ ಪ್ರಾಧಿಕಾರ
3. ಶ್ರೀ ಅಮೃತ್‌ರಾಜ್, ಸ್ಥಳೀಯ ಸಂಸ್ಥೆ ನಾಮನಿರ್ದೇಶಿತ ಸದಸ್ಯರು

ಗೈರುಹಾಜರಾದವರು :–

1. ಮುಖ್ಯಾಧಿಕಾರಿಗಳು, ಪುರಸಭೆ, ಕುಶಾಲನಗರ

ವಿಷಯ ಸಂಖ್ಯೆ(01): ದಿನಾಂಕ: 13–12–2023 ರಂದು ನಡೆದ ಪ್ರಾಧಿಕಾರದ 59ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ಸ್ಥಿರೀಕರಿಸುವ ಬಗ್ಗೆ.

ಟಿಪ್ಪಣಿ: ದಿನಾಂಕ: 13–12–2023 ರಂದು ನಡೆದ ಪ್ರಾಧಿಕಾರದ 58ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ಓಪ್ಪಿ ಸ್ಥಿರೀಕರಿಸುವ ಬಗ್ಗೆ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ.

ದಿನಾಂಕ: 13–12–2023 ರಂದು ನಡೆದ ಸಭೆಯ ನಡವಳಿಗಳ ವಿಷಯ ಸಂಖ್ಯೆ 9(ಅ)ರಲ್ಲಿ ಕುಶಾಲನಗರ ಯೋಜನಾ ಪ್ರಾಧಿಕಾರದ ಹೆಸರಿನಲ್ಲಿರುವ ನಾಗರೀಕ ಸೌಲಭ್ಯ ನಿವೇಶನಗಳನ್ನು ಹಂಚಿಕೆ ಮಾಡಲು ಉಪನೋಂದಣಾಧಿಕಾರಿಗಳು ನಿಗದಿಪಡಿಸಿರುವ ಮಾರುಕಟ್ಟೆ ದರದಂತೆ ಗುತ್ತಿಗೆ ಮೊಬಲಗನ್ನು ನಿಗಧಿಪಡಿಸಿ ಸಂಘ ಸಂಸ್ಥೆಯವರಿಗೆ 30 ವರ್ಷಗಳ ಗುತ್ತಿಗೆ (ಲೀಜ್) ಅವಧಿಗೆ ವಿತರಿಸಲು ಸರ್ಕಾರದ ಸುತ್ತೋಲೆಯಂತೆ ಸ್ಥಳೀಯ ಯೋಜನಾ ಪ್ರದೇಶದಲ್ಲಿ ವ್ಯಾಪಕ ಪ್ರಚಾರದಲ್ಲಿರುವ ಕನ್ನಡ (ಶಕ್ತಿ ದಿನಪತ್ರಿಕೆ) ಮತ್ತು ಇಂಗ್ಲೀಷ್ (Deccan Herald) ಎರಡು ಭಾಷೆಯ ದಿನಪತ್ರಿಕೆಗಳಲ್ಲಿ ದಿನಾಂಕ:25–07–2023 ರಂದು ಪ್ರಕಟಣೆಯನ್ನು ನೀಡಲಾಗಿತ್ತು. ಆದರೆ ಇದುವರೆಗೂ ಯಾವುದೇ ಅರ್ಜಿಯು ಪ್ರಾಧಿಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ. ಮಾನ್ಯ ಅಧ್ಯಕ್ಷರು ಪ್ರಕಟಣೆಯನ್ನು ಮತ್ತೊಮ್ಮೆ ಕಛೇರಿಯ ಸೂಚನಾ ಫಲದಲ್ಲಿ ಹಾಗೂ ಕಛೇರಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕೆಂದು ಸದಸ್ಯಕಾರ್ಯದರ್ಶಿಯವರಿಗೆ ಸೂಚಿಸಿ ಸಭೆಯಲ್ಲಿ ನಿರ್ಣಯಿಸಲಾಗಿದ್ದು, ಅದರಂತೆ ಕ್ರಮವಹಿಸಲಾಗಿದೆ.

ಮುಂದುವರೆದು, ಕರ್ನಾಟಕ ಯೋಜನಾ ಪ್ರಾಧಿಕಾರಗಳ (ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆ) ನಿಯಮಗಳು. 2016 ರ ಉಪನಿಯಮ(4)ರ ಪ್ರಕಾರ ಪ್ರಾಧಿಕಾರವು ಕೇಂದ್ರ ಅಥವಾ ರಾಜ್ಯ ಸರ್ಕಾರದ ಇಲಾಖೆಗಳು, ಸ್ಥಳೀಯ ಪ್ರಾಧಿಕಾರಗಳು ಮತ್ತು ಸಾರ್ವಜನಿಕ ಸೇವೆಗಳನ್ನು ಒದಗಿಸುವ ಶಾಸನಬದ್ಧ ಸಂಸ್ಥೆಗಳ ಅಗತ್ಯತೆಯ ಕೋರಿಕೆ ಪಟ್ಟಿಯನ್ನು ಹಾಗೂ ಆಯಾ ಜಿಲ್ಲೆಯ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ವಾರ್ಷಿಕವಾಗಿ ಎಲ್ಲಿ ಹಂಚಿಕೆಯನ್ನು ಮಾಡಲಾಗಿಲ್ಲವೋ ಅಲ್ಲಿ ಭೂಮಿ ಅಥವಾ ನಾಗರೀಕ ಸೌಕರ್ಯ ನಿವೇಶನದ ಹಂಚಿಕೆಗಾಗಿ ಸ್ವೀಕರಿಸಿದ ಅಗತ್ಯತೆಗಳ ಕೋರಿಕೆ ಪಟ್ಟಿಯನ್ನು ಪಡೆಯಬೇಕಾಗಿರುವುದರಿಂದ, ಕುಶಾಲನಗರ ಯೋಜನಾ ಪ್ರಾಧಿಕಾರದ ಹೆಸರಿನಲ್ಲಿರುವ ನಾಗರೀಕ ಸೌಲಭ್ಯ ನಿವೇಶನಗಳ ಪಟ್ಟಿಯನ್ನು ಮಾನ್ಯ ಜಿಲ್ಲಾಧಿಕಾರಿಗಳ ಅವಗಾಹನೆಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ದಿನಾಂಕ:22–01–2024 ರಂದು ಸಲ್ಲಿಸಲಾಗಿದೆ ಮತ್ತು ಪ್ರತಿಯನ್ನು ಮಾನ್ಯ

ಮುಖ್ಯಕಾರ್ಯನಿರ್ವಹಣಾಧಿಕಾರಿ, ಕೊಡಗು ಜಿಲ್ಲಾ ಪಂಚಾಯತ್ ಮಡಿಕೇರಿ ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ. ಮಾನ್ಯ ಜಿಲ್ಲಾಧಿಕಾರಿಗಳಿಂದ ಮತ್ತು ಮುಖ್ಯಕಾರ್ಯನಿರ್ಹಣಾಧಿಕಾರಿಗಳಿಂದ ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.

ಸರ್ಕಾರದ ಸುತ್ತೋಲೆಯಲ್ಲಿ ಕರ್ನಾಟಕ ಯೋಜನಾ ಪ್ರಾಧಿಕಾರಗಳ (ನಾಗರೀಕ ಸೌಕರ್ಯ ನಿವೇಶನಗಳ ಹಂಚಿಕೆ) ನಿಯಮಗಳು 2016 ರ ಪ್ರಕಾರ ಕೇಂದ್ರ ಅಥವಾ ರಾಜ್ಯ ಸರ್ಕಾರದ ಇಲಾಖೆಗಳು, ಸ್ಥಳೀಯ ಪ್ರಾಧಿಕಾರ, ಶಾಸನಾತ್ಮಕ ಸಂಸ್ಥೆಗಳು ಅಂದರೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 (1960ರ ಕರ್ನಾಟಕ ಅಧಿನಿಯಮ 17)ರ ಮೇರೆಗೆ ಅಥವಾ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 (1959ರ ಕರ್ನಾಟಕ ಅಧಿನಿಯಮ 11)ರ ಮೇರೆಗೆ ನೋಂದಾಯಿತವಾದ ಒಂದು ಸಂಘ ಅಥವಾ ಒಂದು ಸಂಸ್ಥೆ ಅಥವಾ ಶೈಕ್ಷಣಿಕ, ಧಾರ್ಮಿಕ ಅಥವಾ ಸಾಂಸ್ಕೃತಿಕ ಸಂಸ್ಥೆಗಳಾಗಿರಬಹುದಾದ ಸಂಪೂರ್ಣವಾಗಿ ಯಾವುದೇ ಧರ್ಮಾರ್ಥ ಉದ್ದೇಶಕ್ಕಾಗಿ ಸೃಜಿಸಲಾದ ಟ್ರಸ್ಟ್ ಅಥವಾ ಕರ್ನಾಟಕ ಸಹಕಾರ ಸಂಘಗಳಿಗೆ 30 ವರ್ಷಗಳ ಅವಧಿಗೆ ಗುತ್ತಿಗೆಗಾಗಿ (ಲೀಜ್) ವಿತರಿಸಲು ಕ್ರಮವಹಿಸಬೇಕಾಗಿರುವುದರಿಂದ ತಹಶೀಲ್ದಾರ್, ಕುಶಾಲನಗರ ಇವರಿಗೆ ದಿನಾಂಕ: 22–01–2024 ರಂದು ಪತ್ರ ಬರೆದು ಕುಶಾಲನಗರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ರಾಜ್ಯ ಸರ್ಕಾರದ ಇಲಾಖೆಗಳು, ಸ್ಥಳೀಯ ಪ್ರಾಧಿಕಾರ, ಶಾಸನಾತ್ಮಕ ಸಂಸ್ಥೆಗಳ ಪಟ್ಟಿಯನ್ನು ತುರ್ತಾಗಿ ಈ ಕಛೇರಿಗೆ ನೀಡಬೇಕೆಂದು ಕೋರಲಾಗಿದೆ. ತಹಶೀಲ್ದಾರ್, ಕುಶಾಲನಗರ ತಾಲ್ಲೂಕು ಇವರಿಂದ ಯಾವುದೇ ಮಾಹಿತಿಯು ಇದುವರೆಗೂ ಲಭ್ಯವಾಗಿರುವುದಿಲ್ಲ. ದಿನಾಂಕ:04–02–2024 ರಂದು ಹಿರಿಯ ಉಪನೋಂದಣಾಧಿಕಾರಿಗಳು, ಕುಶಾಲನಗರ ಇವರಿಗೆ ಪತ್ರ ಬರೆದು ಪ್ರಾಧಿಕಾರದ ಹೆಸರಿನಲ್ಲಿರುವ ಸಿ.ಎ ನಿವೇಶನಗಳ ಇತ್ತೀಚಿನ ಮಾರುಕಟ್ಟೆ ದರವನ್ನು ನಿಗಧಿಪಡಿಸಿಕೊಡುವಂತೆ ಕೋರಲಾಗಿದೆ.

ಮುಂದುವರೆದು, ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ ಇವರು ದಿನಾಂಕ:01–03–2024 ರ ಪತ್ರದಲ್ಲಿ ಶ್ರೀ ವಿವೇಕಾನಂದ ಎಜುಕೇಷನ್ ಟ್ರಸ್ಟ್(ರಿ),ಕುಶಾಲನಗರ ಇವರ ಶಿಕ್ಷಣಸಂಸ್ಥೆ ಐ.ಡಿ.ಎಸ್.ಎಂ.ಟಿ ಯೋಜನೆಯಲ್ಲಿ ರಚಿಸಲಾದ ಗುಂಡುರಾವ್ ಬಡಾವಣೆಯಲ್ಲಿದ್ದು ಆಟದ ಮೈದಾನ ಮತ್ತು ತರಗತಿ ಕೊಠಡಿ ಕೊರತೆಯಿರುವುದರಿಂದ ಸದರಿಯವರು ನಾಗರೀಕ ಸೌಲಭ್ಯ ನಿವೇಶನವನ್ನು ಕೋರಿದ್ದು, ಈ ಬಗ್ಗೆ ಮಾನ್ಯ ವಿಭಾಗಾಧಿಕಾರಿಯವರು ಈ ಸಂಬಂಧ ನಿಯಮಾನುಸಾರ ಪರಿಶೀಲಿಸಿ ವರದಿ ನೀಡಲು ಸೂಚಿಸಿರುವುದರಿಂದ ಗುಂಡುರಾವ್ ಬಡಾವಣೆಯ ನಾಗರೀಕ ಸೌಲಭ್ಯ ನಿವೇಶನವು ತಮ್ಮ ಇಲಾಖೆಯಲ್ಲಿ ನೋಂದಣಿ ಆಗಿರುವುದರಿಂದ ಹಾಗೂ ಸಿ.ಎ. ನಿವೇಶನ ಮಂಜೂರಾತಿ ತಮ್ಮ ಇಲಾಖಾ ವ್ಯಾಪ್ತಿಗೆ ಬರುವುದರಿಂದ ಶ್ರೀ ವಿವೇಕಾನಂದ ಏಜುಕೇಷನ್ ಟ್ರಸ್ಟ್ (ರಿ) ರವರ ಕೋರಿಕೆಯಂತೆ ಪರಿಶೀಲಿಸಿ ಸೂಕ್ತ ಕ್ರಮವಹಿಸುವಂತೆ ಕೋರಿರುತ್ತಾರೆ.

ಸದಸ್ಯಕಾರ್ಯದರ್ಶಿ ಅಭಿಪ್ರಾಯ: ಟಿಪ್ಪಣಿಯಲ್ಲಿ ವಿವರಿಸಿರುವಂತೆ ಮಾನ್ಯ ಜಿಲ್ಲಾಧಿಕಾರಿಗಳಿಂದ, ಮಾನ್ಯ ಮುಖ್ಯಕಾರ್ಯನಿರ್ವಹಣಾಧಿಕಾರಿ, ಕೊಡಗು ಜಿಲ್ಲಾ ಪಂಚಾಯತ್ ಮಡಿಕೇರಿ ಇವರಿಂದ ಮತ್ತು ತಹಶೀಲ್ದಾರ್ ರವರಿಂದ ಮಾಹಿತಿ ಬಂದ ನಂತರ 2024–25ನೇ ಸಾಲಿನಲ್ಲಿ ಪ್ರಾಧಿಕಾರದಿಂದ ಸಿ.ಎ. ನಿವೇಶನಗಳನ್ನು ಹಂಚಿಕೆ ಮಾಡಲು ಉಪನೋಂದಣಾಧಿಕಾರಿಗಳು ನಿಗದಿಪಡಿಸಿ ನೀಡುವ ಮಾರುಕಟ್ಟೆ ದರದಂತೆ ಗುತ್ತಿಗೆ ಮೊಬಲಗನ್ನು ನಿಗಧಿಪಡಿಸಿ ಪ್ರಕಟಣೆಯನ್ನು ನೀಡಬೇಕಾಗಿದೆ.

ನಿರ್ಣಯ: ಟಿಪ್ಪಣಿಯಲ್ಲಿ ವಿವರಿಸಿರುವಂತೆ ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿ ಮತ್ತು ಮಾನ್ಯ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಕೊಡಗು ಜಿಲ್ಲಾ ಪಂಚಾಯತ್ ಮಡಿಕೇರಿ ಕಛೇರಿಗಳಿಂದ ಕೊಡಗು ಜಿಲ್ಲೆಯಲ್ಲಿರುವ ಎಲ್ಲಾ ರಾಜ್ಯ ಸರ್ಕಾರದ ಇಲಾಖೆಗಳು, ಸ್ಥಳೀಯ ಪ್ರಾಧಿಕಾರಗಳ ಪಟ್ಟಿಯನ್ನು ಪಡೆದು, ಎಲ್ಲಾ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಹಾಗೂ ಉಪನಿರ್ದೇಶಕರುಗಳಿಗೆ ಹಾಗೂ ಆರಕ್ಷಕ ಉಪಅಧಿಕ್ಷಕರಿಗೆ ಪ್ರತ್ಯೇಕವಾಗಿ ಪತ್ರ ಬರೆದು ಕುಶಾಲನಗರ

ಯೋಜನಾ ಪ್ರಾಧಿಕಾರದ ಹೆಸರಿನಲ್ಲಿರುವ ನಾಗರೀಕ ಸೌಲಭ್ಯ ನಿವೇಶನಗಳ ಪಟ್ಟಿಯನ್ನು ನೀಡಿ ಅಗತ್ಯತೆ ಇರುವ ಬಗ್ಗೆ ಮಾಹಿತಿ ನೀಡಲು ತಿಳಿಸಬೇಕೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯಸಂಖ್ಯೆ:(02): ಕುಶಾಲನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಕೆರೆಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ.

ಟಿಪ್ಪಣಿ: ಪ್ರಾಧಿಕಾರದ ಸಭೆ ದಿನಾಂಕ:28–07–2023 ರಂದು ನಡೆದ ಸಭೆಯ ನಡವಳಿಗಳ ವಿಷಯ ಸಂಖ್ಯೆ 12(ಅ)ರ ನಿರ್ಣಯದಂತೆ, ಬೈಚನಹಳ್ಳಿ ಗ್ರಾಮದ ಸ.ನಂ 35 ರ ತಾವರೆಕೆರೆ, ಹಾಗೂ ಮುಳ್ಳುಸೋಗೆ ಗ್ರಾಮ, ಸ.ನಂ. 59 ರ ಸೋಮೇಶ್ವರ ದೇವರ ಕೆರೆಗಳನ್ನು ಅಭಿವೃದ್ಧಿಪಡಿಸುವ ಸಂಬಂಧ ಕೆರೆ ಮಾಲಿಕತ್ವಕ್ಕೆ ಸಂಬಂಧಿಸಿದಂತೆ ಸಂಬಂಧಪಟ್ಟ ಇಲಾಖೆಯ ಪೂರ್ವಾನುಮತಿ ಪಡೆಯಬೇಕಿರುವುದರಿಂದ ಸದರಿ ಕೆರೆಗಳ ಆರ್.ಟಿ.ಸಿ ಯಲ್ಲಿ ಸರ್ಕಾರದವರು ಎಂಬುದಾಗಿ ನಮೂದಾಗಿರುವುದರಿಂದ ಸದರಿ ಕೆರೆಗಳು ಯಾವ ಇಲಾಖೆಯ ಮಾಲೀಕತ್ವಕ್ಕೆ ಒಳಪಟ್ಟಿದೆ ಎಂಬ ಮಾಹಿತಿಯನ್ನು ದಾಖಲೆಯೊಂದಿಗೆ ನೀಡಬೇಕೆಂದು ಹಾಗೂ ಪ್ರಾಧಿಕಾರ್ ವ್ಯಾಪ್ತಿಯಲ್ಲಿ ಬರುವ ಉಳಿದ ಕೆರೆಗಳು ಯಾವ ಇಲಾಖೆಯ ಮಾಲೀಕತ್ವಕ್ಕೆ ಒಳಪಟ್ಟಿದೆ ಎಂಬ ಮಾಹಿತಿಯನ್ನು ನೀಡಬೇಕೆಂದು ದಿನಾಂಕ:05–09–2023 ರಂದು ತಹಶೀಲ್ದಾರ್, ಕುಶಾಲನಗರ ತಾಲ್ಲೂಕು ಇವರಿಗೆ ಪತ್ರ ಬರೆದು ಕೋರಲಾಗಿದೆ ಮತ್ತು ದಿನಾಂಕ:08–09–2023 ರಂದು ಸಣ್ಣ ನೀರಾವರಿ ಇಲಾಖೆ ಮಡಿಕೇರಿ ಇವರಿಗೆ ಪತ್ರ ಬರೆದು ಸರ್ಕಾರದ ಸುತ್ತೋಲೆಗಳಲ್ಲಿನ ಅಂಶಗಳಿಗೆ ಅನುಗುಣವಾಗಿ ಸದರಿ ಕೆರೆಗಳ ಸವಿಸ್ತಾರವಾದ ಅಂದಾಜು (comprehensive Estimate) ಹಾಗೂ ಯೋಜನೆಯ ವಿಸ್ತೃತ ಯೋಜನಾ ವರದಿಯನ್ನು (DPR) ತಯಾರಿಸಿ ತಾಂತ್ರಿಕ ಒಪ್ಪಿಗೆಯೊಂದಿಗೆ ಪ್ರಾಧಿಕಾರಕ್ಕೆ ಸಲ್ಲಿಸುವಂತೆ ಮತ್ತೊಮ್ಮೆ ಕೋರಲಾಗಿದೆ.

ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಅಭಿವೃದ್ಧಿ ಉಪವಿಭಾಗ ಮಡಿಕೇರಿ ಇವರು ದಿನಾಂಕ:15–09–2023ರ ಪತ್ರದಲ್ಲಿ ಸದರಿ ಕೆರೆಗಳು ನಮ್ಮ ಇಲಾಖಾ ವ್ಯಾಪ್ತಿಗೆ ಒಳಪಡುವುದಿಲ್ಲವಾದ್ದರಿಂದ, ಸದರಿ ಕೆರೆಗಳ ಮಾಹಿತಿ ನಮ್ಮ ಬಳಿ ಇರುವುದಿಲ್ಲವಾದ್ದರಿಂದ ಕಾಮಗಾರಿಯ ಯೋಜನಾ ವರದಿಯನ್ನು (DPR) Consultant ಗಳ ಮುಖಾಂತರ ತಯಾರಿಸಿ ಸಲ್ಲಿಸಿದಲ್ಲಿ, ಸದರಿ ಯೋಜನಾ ವರದಿಯನ್ನು ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಮಂಜೂರಾತಿ ಕೋರಿ ಸಲ್ಲಿಸಲಾಗುವುದು ಎಂಬುದಾಗಿ ತಿಳಿಸಿರುತ್ತಾರೆ. ತಹಶೀಲ್ದಾರ್, ಕುಶಾಲನಗರ ತಾಲ್ಲೂಕು ಇವರು ದಿನಾಂಕ:12–01–2024ರ ಪತ್ರದಲ್ಲಿ ಸದರಿ ಕೆರೆಗಳು ಪುರಸಭೆ ವ್ಯಾಪ್ತಿಗೆ ಒಳಪಟ್ಟಿರುತ್ತದೆ ಎಂಬುದಾಗಿ ತಿಳಿಸಿ, ಸದರಿ ಕೆರೆಗಳ ಪಹಣಿ, ಆಕಾರಬಂದ್ ಮತ್ತು ಜಮಾಬಂದಿಗಳ ಪ್ರತಿಗಳನ್ನು ಲಗತ್ತಿಸಿದೆ ಹಾಗೂ ಉಳಿದ ಕೆರೆಗಳ ಪಟ್ಟಿಯನ್ನು ನೀಡಿದ್ದಲ್ಲಿ ಮಾಹಿತಿಯನ್ನು ಪರಿಶೀಲಿಸಿ ನೀಡಲಾಗುವುದು ಎಂದು ತಿಳಿಸಿರುತ್ತಾರೆ. ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಉಳಿದ 5 ಕೆರೆಗಳ ಪಟ್ಟಿಯನ್ನು ನೀಡಿ ಯಾವ ಇಲಾಖೆಯ ಮಾಲೀಕತ್ವಕ್ಕೆ ಒಳಪಟ್ಟಿದೆ ಎಂಬ ಮಾಹಿತಿಯನ್ನು ಸಂಬಂಧಪಟ್ಟ ದಾಖಲೆಯೊಂದಿಗೆ ನೀಡಬೇಕೆಂದು ಕೋರಿ ತಹಶೀಲ್ದಾರರಿಗೆ ದಿನಾಂಕ: 24–01–2024 ರಂದು ಪತ್ರ ಬರೆಯಲಾಗಿದೆ. ಸದರಿಯವರಿಂದ ಮಾಹಿತಿ ಇಲ್ಲಿಯವರೆಗೆ ಲಭ್ಯವಾಗಿರುವುದಿಲ್ಲ.

ಸದಸ್ಯಕಾರ್ಯದರ್ಶಿ ಅಭಿಪ್ರಾಯ: ನಗರಾಭಿವೃದ್ಧಿ ಇಲಾಖೆಯ ಸುತ್ತೋಲೆ ಸಂಖ್ಯೆ: UDD 285 MYAPRA 2016 dt: 03-06-2020 ರನ್ವಯ ಕೆರೆ ಅಭಿವೃದ್ಧಿ ಶುಲ್ಕವನ್ನು ಉಪಯೋಗಿಸಿಕೊಳ್ಳಬೇಕಾಗಿದ್ದು, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಇವರ ಸುತ್ತೋಲೆ ಸಂಖ್ಯೆ: ಕ.ಕೆ.ಸಂ.ಅ.ಪ್ರಾ/ಬೆಂ/ತಾಂತ್ರಿಕ/08/ 2017–18 ದಿನಾಂಕ: 13–03–2018 ರನ್ವಯ ಕುಶಾಲನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಪರಿಸ್ಥಿತಿ, ಆದ್ಯತೆ, ಯೋಜನೆಯ ಮೂಲ ಉದ್ದೇಶ ಹಾಗೂ ಇತರ ವಿವರಣೆಗಳನ್ನು ನೀಡಬೇಕಿರುತ್ತದೆ.

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ) ಇವರ ಸುತ್ತೋಲೆ ಸಂಖ್ಯೆ ಸನೀಇ 131 ಮಸಾವಿ 2016 ದಿನಾಂಕ: 25–02–2017 ರನ್ವಯ ಟಿಪ್ಪಣಿಯಲ್ಲಿ ವಿವರಿಸಿರುವಂತೆ ಸಣ್ಣ ನೀರಾವರಿ ಇಲಾಖೆಗೆ ಈಗಾಗಲೇ ಪತ್ರ ಬರೆಯಲಾಗಿರುತ್ತದೆ. ಸಣ್ಣ ನೀರಾವರಿ ಇಲಾಖೆಯವರು ಸದರಿ ಕೆರೆಗಳು ನಮ್ಮ ಇಲಾಖಾ ವ್ಯಾಪ್ತಿಗೆ ಒಳಪಡುವುದಿಲ್ಲವಾದ್ದರಿಂದ, ಸದರಿ ಕೆರೆಗಳ ಮಾಹಿತಿ ನಮ್ಮ ಬಳಿ ಇರುವುದಿಲ್ಲವಾದ್ದರಿಂದ ಕಾಮಗಾರಿಯ ಯೋಜನಾ ವರದಿಯನ್ನು (DPR) Consultant ಗಳ ಮುಖಾಂತರ ತಯಾರಿಸಿ ಸಲ್ಲಿಸಿದಲ್ಲಿ, ಸದರಿ ಯೋಜನಾ ವರದಿಯನ್ನು ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಮಂಜೂರಾತಿ ಕೋರಿ ಸಲ್ಲಿಸಲಾಗುವುದು ಎಂಬುದಾಗಿ ತಿಳಿಸಿರುತ್ತಾರೆ.

ನಗರಾಭಿವೃದ್ಧಿ ಇಲಾಖೆ ಸುತ್ತೋಲೆ ಸಂಖ್ಯೆ ನಅಇ 36 ಗುಅಪ್ರಾ 2015 ದಿನಾಂಕ:04–08–2015 ರನ್ವಯ ಕೆರೆಗಳ ಸಂರಕ್ಷಣೆ ಉದ್ದೇಶಕ್ಕೆ ಆಯ್ಕೆ ಮಾಡುವಾಗ ಮಾನದಂಡಗಳನ್ನು ಅನುಸರಿಸಬೇಕಿದ್ದು, 2ನೇ ಅಂಶದ ಪ್ರಕಾರ, ಕೆರೆಯ ಮಾಲೀಕತ್ವಕ್ಕೆ ಸಂಬಂಧಿಸಿದಂತೆ ಈಗಾಗಲೇ ತಹಶೀಲ್ದಾರ್ ರವರಿಗೆ ಪತ್ರ ಬರೆಯಲಾಗಿದ್ದು, ಇವರಿಂದ ಯಾವುದೇ ಮಾಹಿತಿ ಬಂದಿರುವುದಿಲ್ಲ. ಸುತ್ತೋಲೆಯಲ್ಲಿನ 4, 5 ಹಾಗೂ 6ನೇ ಅಂಶಗಳನ್ನು ಕ್ರಮವಹಿಸಲು ತಹಶೀಲ್ದಾರ್ ರವರಿಂದ ನಮ್ಮ ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಕೆರೆಗಳ ಒತ್ತುವರಿ ತೆರವುಗೊಳಿಸಿರುವ ಬಗ್ಗೆ ಮಾಹಿತಿಯನ್ನು ಪಡೆಯಬೇಕಾಗಿರುತ್ತದೆ ಹಾಗೂ ಮಾಹಿತಿಗಳನ್ನು ಪಡೆದ ನಂತರ ಆದ್ಯತೆ ಮೇರೆಗೆ ಸಣ್ಣ ನೀರಾವರಿ ಇಲಾಖೆಯವರ ಸಹಯೋಗದೊಂದಿಗೆ DPR ತಯಾರಿಸಲು ಮತ್ತೊಮ್ಮೆ ಪತ್ರ ಬರೆದು ತದನಂತರ ಕ್ರಮವಹಿಸಲಾಗುವುದು.

ನಿರ್ಣಯ: ಸರ್ಕಾರದ ಸುತ್ತೋಲೆಗಳನ್ವಯ ಸಂಬಂಧಪಟ್ಟ ಇಲಾಖೆಗಳಾದ ಸಣ್ಣ ನೀರಾವರಿ ಅಭಿವೃದ್ಧಿ ಉಪವಿಭಾಗ ಮಡಿಕೇರಿ, ಮುಖ್ಯಾಧಿಕಾರಿ ಪಟ್ಟಣಪಂಚಾಯಿತಿ ಮತ್ತು ತಹಶೀಲ್ದಾರ್ ಕುಶಾಲನಗರ ಇವರಿಂದ ಮಾಹಿತಿಯನ್ನು ಪಡೆದು ಸಲ್ಲಿಸುವಂತೆ ಸಭೆಯು ಸದಸ್ಯಕಾರ್ಯದರ್ಶಿಯವರಿಗೆ ಸೂಚಿಸಿ ನಿರ್ಣಯಿಸಿತು.

ವಿಷಯಸಂಖ್ಯೆ:(03): ಪ್ರಾಧಿಕಾರದ ಖಾತೆಗೆ ಡಿಸೆಂಬರ್ 2023, ಜನವರಿ 2024 ಮತ್ತು ಫೆಬ್ರವರಿ 2024 ರ ಮಾಹೆಗಳ ಜಮಾ ಮತ್ತು ಖರ್ಚುಗಳ ವಿವರಗಳನ್ನು ಪ್ರಾಧಿಕಾರದ ಸಭೆಗೆ ಮಂಡಿಸುವ ಬಗ್ಗೆ.

ಟಿಪ್ಪಣಿ: ಡಿಸೆಂಬರ್ 2023, ಜನವರಿ 2024 ಮತ್ತು ಫೆಬ್ರವರಿ 2024 ರ ಮಾಹೆಗಳ ಜಮಾ ಮತ್ತು ಖರ್ಚುಗಳನ್ನು ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ.

ಡಿಸೆಂಬರ್ – 2023					
ಕ್ರ.ಸಂ	**ಜಮಾ**	**ಮೊಬಲಗು**	**ಕ್ರ.ಸಂ**	**ವೆಚ್ಚ**	**ಮೊಬಲಗು**
1.	**ಪ್ರಾರಂಭಿಕ ಶಿಲ್ಕು**	**ರೂ. 29,69,643=00**	1.	ಹೊರಗುತ್ತಿಗೆ ಸೇವೆ	ರೂ. 54,820=00
2.	ಡಿಸೆಂಬರ್ 2023 ರ ಮಾಹೆಯ ಜಮಾ		2.	ಸದಸ್ಯಕಾರ್ಯದರ್ಶಿ ವೇತನ	ರೂ. 10,680=00
			3.	ಲೆಕ್ಕಪರಿಶೋಧನೆ ಶುಲ್ಕ	ರೂ. 10,714=00
	1) ಪರಿಶೀಲನಾ ಶುಲ್ಕ	ರೂ. 93,610=00	4.	ವಿದ್ಯುತ್	ರೂ. 978=00
	2) ಕೆ.ಟಿ.ಸಿ.ಪಿ.ಕಾಯ್ದೆ 18ರಅಡಿಯಲ್ಲಿ ಪಾವತಿಸುವ ಶುಲ್ಕ	ರೂ. 1,15,400=00	5.	ದೂರವಾಣಿ	ರೂ. 1768=00
			6.	ಅಂಚೆ ಚೀಟಿ	ರೂ. 2,000=00
	3) ಕಟ್ಟಡದ ಶುಲ್ಕ	ರೂ. 11,690=00			
	4) ಇತರೆ ಶುಲ್ಕ	ರೂ. 9,360=00		**ವೆಚ್ಚ**	**ರೂ. 80,960=00**
	5) ಬ್ಯಾಂಕ್ ಬಡ್ಡಿ	ರೂ. 21,049=00		**ಅಖೈರು ಶಿಲ್ಕು**	**ರೂ. 31,39,792=00**
	ಒಟ್ಟು ಮೊಬಲಗು	**ರೂ. 32,20,752=00**		**ಒಟ್ಟು ಮೊಬಲಗು**	**ರೂ. 32,20,752=00**

ಜನವರಿ–2024					
ಕ್ರ.ಸಂ	ಜಮಾ	ಮೊಬಲಗು	ಕ್ರ.ಸಂ	ವೆಚ್ಚ	ಮೊಬಲಗು
1.	**ಪ್ರಾರಂಭಿಕ ಶಿಲ್ಕು**	**ರೂ. 31,20,752=00**	1.	ಹೊರಗುತ್ತಿಗೆ ಸೇವೆ	ರೂ. 54,820=00
2.	ಜನವರಿ 2024 ರ ಮಾಹೆಯ ಜಮಾ		2.	ಸದಸ್ಯಕಾರ್ಯದರ್ಶಿ ವೇತನ	ರೂ. 88,261=00
			3.	ವಿದ್ಯುತ್	ರೂ. 946=00
	1) ಪರಿಶೀಲನಾ ಶುಲ್ಕ	ರೂ. 40,470=00	4.	ದೂರವಾಣಿ	ರೂ. 1,769=00
	2) ಕೆ.ಟಿ.ಸಿ.ಪಿ.ಕಾಯ್ದೆ 18ರಅಡಿಯಲ್ಲಿ ಪಾವತಿಸುವ ಶುಲ್ಕ	ರೂ. 1,01,170=00	5.	ಗಣರಾಜ್ಯೋತ್ಸವ ವಂತಿಕೆ	ರೂ. 5,000=00
			6.	ಕಛೇರಿ ಬಾಡಿಗೆ	ರೂ. 64,400=00
				ವೆಚ್ಚ	ರೂ. 2,15,196=00
	3) ಕಟ್ಟಡದ ಶುಲ್ಕ	ರೂ. 4,220=00 ರೂ. 32371=00		**ಅಖೈರು ಶಿಲ್ಕು**	ರೂ. 30,70,456=00
	ಒಟ್ಟು ಮೊಬಲಗು	**ರೂ. 32,85,652=00**		**ಒಟ್ಟು ಮೊಬಲಗು**	**ರೂ. 32,85,652=00**

ಫೆಬ್ರವರಿ–2024					
ಕ್ರ.ಸಂ	ಜಮಾ	ಮೊಬಲಗು	ಕ್ರ.ಸಂ	ವೆಚ್ಚ	ಮೊಬಲಗು
1.	**ಪ್ರಾರಂಭಿಕ ಶಿಲ್ಕು**	**ರೂ. 30,70,456=00**	1.	ಹೊರಗುತ್ತಿಗೆ ಸೇವೆ	ರೂ. 54,820=00
2.	ಫೆಬ್ರವರಿ 2024 ರ ಮಾಹೆಯ ಜಮಾ		2.	ಸದಸ್ಯಕಾರ್ಯದರ್ಶಿ ವೇತನ	ರೂ. 88,261=00
			3.	ಸಾದಿಲ್ವಾರು ವೆಚ್ಚ	ರೂ. 4,602=00
	1) ಪರಿಶೀಲನಾ ಶುಲ್ಕ	ರೂ. 26,150=00	4.	ವಿದ್ಯುತ್	ರೂ. 1,009=00
	2) ಕೆ.ಟಿ.ಸಿ.ಪಿ.ಕಾಯ್ದೆ 18ರಅಡಿಯಲ್ಲಿ ಪಾವತಿಸುವ ಶುಲ್ಕ	ರೂ. 7,320=00	5.	ದೂರವಾಣಿ	ರೂ. 1,769=00
			6.	ಸದಸ್ಯಕಾರ್ಯದರ್ಶಿಯವರ ವಾಹನ ವೆಚ್ಚ	ರೂ. 2,000=00
	3) ಕಟ್ಟಡದ ಶುಲ್ಕ	ರೂ. 10,400=00		**ವೆಚ್ಚ**	**ರೂ. 1,52,461=00**
	4) ಇತರೆ ಶುಲ್ಕ	ರೂ. 3,240=00		**ಅಖೈರು ಶಿಲ್ಕು**	**ರೂ. 29,65,105=00**
	ಒಟ್ಟು ಮೊಬಲಗು	**ರೂ. 31,17,566=00**		**ಒಟ್ಟು ಮೊಬಲಗು**	**ರೂ. 31,17,566=00**

29–02–2024 ರ ಅಂತ್ಯಕ್ಕೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಕುಶಾಲನಗರ ಶಾಖೆಯಲ್ಲಿ ಇರುವ ಮೊಬಲಗಿನ ವಿವರ.

ಕ್ರ.ಸಂ.	ಬ್ಯಾಂಕ್ ಖಾತೆಯ ವಿವರ	ಮೊಬಲಗು
1.	ಉಳಿತಾಯ ಶುಲ್ಕದ ಖಾತೆ ಸಂಖ್ಯೆ: 64041739956 (ಪರಿಶೀಲನಾ ಶುಲ್ಕ, ಕೆ.ಟಿ.ಸಿ.ಪಿ.ಕಾಯ್ದೆ 18ರ ಅಡಿಯಲ್ಲಿ ಉತ್ತಮತೆ ಶುಲ್ಕ, ಕಟ್ಟಡ ಶುಲ್ಕ ಹಾಗೂ ಇತರೆ ಶುಲ್ಕ)	29,65,105=00
2.	ಕೆರೆ ಅಭಿವೃದ್ಧಿ ಶುಲ್ಕದ ಖಾತೆ ಸಂಖ್ಯೆ: 64113591421	4,30,601=00
3.	ಸೆಸ್ ಶುಲ್ಕದ ಖಾತೆ ಸಂಖ್ಯೆ: 40179698207 (ನೀರು ಸರಬರಾಜು ಸೆಸ್, ಸ್ಲಂ ಸೆಸ್, ವರ್ತುಲ ರಸ್ತೆ,)	3,22,885=00
	ಒಟ್ಟು ಮೊಬಲಗು	**37,18,591=00**

ನಿರ್ಣಯ: ಡಿಸೆಂಬರ್ 2023, ಜನವರಿ 2024 ಮತ್ತು ಫೆಬ್ರವರಿ 2024 ರ ಮಾಹೆಗಳ ಜಮಾ ಮತ್ತು ಖರ್ಚುಗಳನ್ನು ಸಭೆಯಲ್ಲಿ ಚರ್ಚಿಸಿ, ಸರ್ವಾನುಮತದಿಂದ ಒಪ್ಪಿ ಸ್ಥಿರೀಕರಿಸಲಾಯಿತು.

ವಿಷಯ ಸಂಖ್ಯೆ (04): ಕುಶಾಲನಗರ ಯೋಜನಾ ಪ್ರಾಧಿಕಾರದ 2024–25ನೇ ಸಾಲಿನ ಆಯವ್ಯಯ ಅಂದಾಜಿಗೆ ಅನುಮೋದನೆ ನೀಡುವ ಕುರಿತು.

ಟಿಪ್ಪಣಿ: ಕುಶಾಲನಗರ ಯೋಜನಾ ಪ್ರಾಧಿಕಾರದ 2024–25 ನೇ ಸಾಲಿನ ಆಯವ್ಯಯ ಅಂದಾಜನ್ನು ಸರ್ಕಾರದ ಆದೇಶದ ರೀತ್ಯಾ ತಯಾರಿಸಿದ್ದು, ಪ್ರಾಧಿಕಾರದ ಸಭೆಯ ಅನುಮೋದನೆಗಾಗಿ ಆಯವ್ಯಯವನ್ನು ಮಂಡಿಸಿದೆ.

ನಿರ್ಣಯ: ಕುಶಾಲನಗರ ಯೋಜನಾ ಪ್ರಾಧಿಕಾರದ 2024–25 ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಪ್ರಾಧಿಕಾರದ ಸಭೆಯು ಪರಿಶೀಲಿಸಿ ಚರ್ಚಿಸಿತು ಹಾಗೂ ಆಯವ್ಯಯ ಅಂದಾಜುಗಳನ್ನು ಸಭೆಯು ಅಂಗೀಕರಿಸಿತು ಹಾಗೂ ಅನುಮೋದನೆಗಾಗಿ ಮಾನ್ಯ ಜಿಲ್ಲಾಧಿಕಾರಿಯವರಿಗೆ ಸಲ್ಲಿಸಲು ತೀರ್ಮಾನಿಸಲಾಯಿತು.

ವಿಷಯ ಸಂಖ್ಯೆ(5): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ ಮುಳ್ಳುಸೋಗೆ ಗ್ರಾಮದ ಸ.ನಂ. 41/ಎ ರಲ್ಲಿ 2.17 ಎಕರೆ, ಸ.ನಂ. 42/1 ರಲ್ಲಿ 4.32.50 ಎಕರೆ ಮತ್ತು ಗೊಂದಿಬಸವನಹಳ್ಳಿ ಗ್ರಾಮದ ಸ.ನಂ. 44/3 ರಲ್ಲಿ 0.88 ಎಕರೆ, ಸ.ನಂ. 37/2 ರಲ್ಲಿ 0.52.50 ಎಕರೆ ಒಟ್ಟು 7.90 ಎಕರೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡುವ ಹಾಗೂ ನಿವೇಶನಗಳನ್ನು ಬಿಡುಗಡೆಗೊಳಿಸುವ ಬಗ್ಗೆ (**ಅರ್ಜಿದಾರರು:– ಶ್ರೀ ಎಸ್.ಎಸ್. ಮನೋಹರ್**)

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಪ್ರಶ್ನಿತ ಜಮೀನನ್ನು ಮಾನ್ಯ ಜಿಲ್ಲಾದಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ದಿನಾಂಕ:12–09–2008 ರಂದು ವಾಸದ ಉದ್ದೇಶಕ್ಕೆ ಭೂಪರಿವರ್ತಿಸಿ ಆದೇಶಿಸಿರುತ್ತಾರೆ. ಸದರಿ ಜಮೀನಿನ ವಸತಿ ವಿನ್ಯಾಸ ನಕ್ಷೆಯು ಈ ಹಿಂದೆ ದಿನಾಂಕ:20–10–2008 ರಂದು ಕಾರ್ಯದರ್ಶಿ, ಗ್ರಾಮಪಂಚಾಯಿತಿ, ಮುಳ್ಳುಸೋಗೆ ಇವರಿಂದ ನೇರವಾಗಿ ಅನುಮೋದನೆಗೊಂಡಿರುತ್ತದೆ. ಅದರಂತೆ ಸದರಿ ವಿನ್ಯಾಸದಲ್ಲಿನ ರಸ್ತೆ ಮತ್ತು ಉದ್ಯಾನವನ ಜಾಗಗಳನ್ನು ಮಾಲೀಕರು ದಿನಾಂಕ:03–11–2008 ರಂದು ದಾನಪತ್ರದ ಮೂಲಕ ಮುಳ್ಳುಸೋಗೆ ಗ್ರಾಮಪಂಚಾಯಿತಿಗೆ ಹಸ್ತಾಂತರಿಸಿರುತ್ತಾರೆ. ಹಾಗೂ ಕೆಲವು ನಿವೇಶನಗಳು ಮಾರಾಟವಾಗಿರುತ್ತದೆ.

ತದನಂತರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮುಳ್ಳುಸೋಗೆ ಗ್ರಾಮಪಂಚಾಯಿತಿ ಇವರು ದಿನಾಂಕ:12–08–2016 ರಂದು ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿ, ಗ್ರಾಮಪಂಚಾಯಿತಿ ಸಾಮಾನ್ಯ ಸಭೆ ದಿನಾಂಕ:10–08–2016ರ ಠರಾವು ಸಂಖ್ಯೆ 24ರ ತೀರ್ಮಾನದ ಮೇರೆಗೆ ಗ್ರಾಮಪಂಚಾಯಿತಿ ಅನುಮೋದಿತ ಬಡಾವಣಾ ನಕ್ಷೆಯನ್ನು ರದ್ದುಪಡಿಸಿ, ಸದರಿ ಲೇಔಟ್‌ಗೆ ಸಂಬಂಧಿಸಿದ ಮಾರ್ಪಾಡಿತ ನಕ್ಷೆಯನ್ನು ತಯಾರಿಸಿ ಪ್ರಾಧಿಕಾರದಿಂದ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ದಿನಾಂಕ:23–08–2016 ರಂದು ನಡೆದ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಚರ್ಚಿಸಿ, ಅರ್ಜಿದಾರರು ಕೆಲವು ನಿವೇಶನಗಳನ್ನು ಮಾರಾಟ ಮಾಡಿದ್ದು ಹಾಗೂ ಮಾರಾಟವಾದ ನಿವೇಶನಗಳಲ್ಲಿ ಕಟ್ಟಡ ನಿರ್ಮಿಸಲು ಪ್ರಾಧಿಕಾರದಿಂದ ಕಟ್ಟಡ ಪರವಾನಿಗೆಯನ್ನು ನೀಡದಿರುವ ಕಾರಣ, ಅರ್ಜಿದಾರರು ಮಾರಾಟಮಾಡಿರುವ ನಿವೇಶನಗಳಿಗೆ ಏನಾದರೂ ಕಾನೂನು ದೃಷ್ಟಿಯಲ್ಲಿ ತೊಡಕು ಉಂಟಾದಲ್ಲಿ ನಿವೇಶನದ ಮಾಲೀಕರು ಅವರ ಸ್ವಂತ ಖರ್ಚಿನಿಂದ ಬಗೆಹರಿಸಿಕೊಡುವುದಾಗಿ ಪ್ರಮಾಣ ಪತ್ರವನ್ನು ನೀಡಿರುವುದನ್ನು ಗಮನಿಸಿ ಹಾಗೂ ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಕಾನೂನು ಸಲಹೆಗಾರರು ನೀಡಿದ ಸಲಹೆಯನ್ನು ಪರಿಗಣಿಸಿ, ಗ್ರಾಮ ಪಂಚಾಯಿತಿಯಿಂದ ಅನುಮೋದನೆಗೊಂಡ ನಕ್ಷೆಯು ವಲಯನಿಯಮಾವಳಿಗಳ ಪ್ರಕಾರ ಇಲ್ಲದಿರುವುದರಿಂದ ಸದರಿ ವಿನ್ಯಾಸ ನಕ್ಷೆಯನ್ನು ರದ್ದುಪಡಿಸಿ ವಲಯನಿಯಮಾವಳಿ ಪ್ರಕಾರ ಮಾರ್ಪಡಿತ ನಕ್ಷೆಯನ್ನು ಅನುಮೋದಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿದೆ.

ಪ್ರಾಧಿಕಾರದ ಸಭೆಯ ತೀರ್ಮಾನದಂತೆ, ಗ್ರಾಮಪಂಚಾಯಿತಿಯಿಂದ ನೇರವಾಗಿ ಅನುಮೋದನೆ ನೀಡಲಾದ ವಿನ್ಯಾಸ ನಕ್ಷೆಯನ್ನು ರದ್ದುಪಡಿಸಿ, ಅರ್ಜಿದಾರರಿಂದ ದಿನಾಂಕ:06–09–2016 ರಂದು ಅಗತ್ಯ ಶುಲ್ಕಗಳನ್ನು ಪಾವತಿಸಿಕೊಂಡು ಪ್ರಶ್ನಿತ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಈ ಕಛೇರಿಯಿಂದ ಅನುಮೋದನೆ ನೀಡಲಾಗಿದೆ.

ಅದರಂತೆ ಬಡಾವಣೆ ಮಾಲೀಕರು ದಿನಾಂಕ:23–09–2016 ರಂದು ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿರುವ 1339.26 ಚ.ಮೀ ವಿಸ್ತೀರ್ಣವನ್ನು ಪ್ರಾಧಿಕಾರದ ಹೆಸರಿಗೆ ಪರಿತ್ಯಾಜನಾ ಪತ್ರದ ಮೂಲಕ ನೋಂದಣಿ ಮಾಡಿರುತ್ತಾರೆ.

ದಿನಾಂಕ:26–09–2016 ರಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮುಳ್ಳುಸೋಗೆ ಗ್ರಾಮಪಂಚಾಯಿತಿ ಇವರು ಪ್ರಸ್ತಾವನೆಯನ್ನು ಸಲ್ಲಿಸಿ, ಮೊದಲನೇ ಹಂತದ ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಕೋರಿರುತ್ತಾರೆ. ಅರ್ಜಿದಾರರು ಸದರಿ ಜಮೀನಿನ ಮಾರ್ಪಡಿತ ವಿನ್ಯಾಸ ನಕ್ಷೆಯನ್ನು ಅನುಮೋದನೆ ಮಾಡಿಕೊಡಬೇಕೆಂದು ದಿನಾಂಕ:27–09–2016 ರಂದು ಈ ಕಛೇರಿಗೆ ಮನವಿ ಸಲ್ಲಿಸಿರುತ್ತಾರೆ. ಸರ್ಕಾರದ ಸುತ್ತೋಲೆ ಸಂ:ನಇ/08/ಟಿಟಿಪಿ/2013 ದಿನಾಂಕ:24–05–2014 ರನ್ವಯ ಶೇ.40% ರಂತೆ ಸದರಿ ವಿನ್ಯಾಸ ನಕ್ಷೆಯಲ್ಲಿ ಬರುವ ಒಟ್ಟು 91 ನಿವೇಶನಗಳ ಪೈಕಿ 54 ನಿವೇಶನಗಳನ್ನು (ಇದರಲ್ಲಿ 29 ನಿವೆಶನಗಳು ಈಗಾಗಲೇ ಮಾರಾಟವಾಗಿರುತ್ತದೆ) ಮೊದಲನೇ ಹಂತದಲ್ಲಿ ದಿನಾಂಕ:21–10–2016 ರಂದು ಈ ಕಛೇರಿಯಿಂದ ಬಿಡುಗಡೆ ಮಾಡಲಾಗಿದೆ.

ಅರ್ಜಿದಾರರು ಮಾರ್ಪಡಿತ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿದ್ದು, ಅರ್ಜಿದಾರರ ಮನವಿಯಂತೆ ದಿನಾಂಕ:28–10–2016 ರಂದು ಈ ಕಛೇರಿಯಿಂದ ಮಾರ್ಪಡಿತ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿದೆ.

ದಿನಾಂಕ:05–06–2023 ರಂದು ಮುಖ್ಯಾಧಿಕಾರಿಗಳು, ಪುರಸಭೆ, ಕುಶಾಲನಗರ ಮತ್ತು ಅರ್ಜಿದಾರರು ಸದರಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡುವಂತೆ ಹಾಗೂ ಉಳಿಕೆ ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಕೋರಿರುತ್ತಾರೆ ಹಾಗೂ ಅರ್ಜಿದಾರರು ಬಡಾವಣೆ ಅಭಿವೃದ್ಧಿಪಡಿಸಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಗಳಿಂದ ಕಾಮಗಾರಿ ಮುಕ್ತಾಯ ದೃಡೀಕರಣ ಪತ್ರವನ್ನು ಪಡೆದು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಗೊಂದಿಬಸವನಹಳ್ಳಿ ಗ್ರಾಮದ ಸ.ನಂ. 44/3 ರಲ್ಲಿ 0.88 ಎಕರೆ, ಸ.ನಂ. 37/2 ರಲ್ಲಿ 0.52.50 ಎಕರೆ ವಿಸ್ತೀರ್ಣದ ಜಮೀನು ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯ ಹೊರಭಾಗದಲ್ಲಿ ಕಂಡುಬಂದಿದೆ. ಸದರಿ ಪ್ರಸ್ತಾವನೆಯನ್ನು ದಿನಾಂಕ: 28–07–2023 ರಂದು ನಡೆದ ಪ್ರಾಧಿಕಾರದ ಸಭೆ ವಿಷಯಸಂಖ್ಯೆ(4) ರಲ್ಲಿ ಮಂಡಿಸಿದೆ.

ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚೆ ನಡೆದು, ಮುಖ್ಯಾಧಿಕಾರಿ, ಪುರಸಭೆ ಇವರು ಮಾತನಾಡಿ ಸದರಿ ಜಮೀನು ಪ್ರಸ್ತುತ ಕುಶಾಲನಗರ ಪುರಸಭೆಯ ವ್ಯಾಪ್ತಿಗೆ ಒಳಪಡುವ ಕಾರಣದಿಂದ ಸ್ಥಳೀಯ ಯೋಜನಾ ಪ್ರದೇಶದ ಕಾರ್ಯವ್ಯಾಪ್ತಿಯ ಹೊರಗೆ ಕೇವಲ ಎರಡು ನಿವೇಶನಗಳು ಬಿಡುಗಡೆ ಮಾಡಲು ಬಾಕಿ ಉಳಿದಿರುವ ಕಾರಣ ಸದರಿ ಪ್ರಸ್ತಾವನೆಯನ್ನು ವಿಲೇ ಇಡುವ ಬದಲು ಪುರಸಭೆ ವತಿಯಿಂದಲೇ ಈ ಎರಡು ನಿವೇಶನಗಳನ್ನು ಬಿಡುಗಡೆ ಮಾಡಬಹುದೆಂದು ಹಾಗೂ ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶವನ್ನು ವಿಸ್ತರಿಸುವ ಕಾರ್ಯವನ್ನು ಶೀಘ್ರವಾಗಿ ಕೈಗೊಳ್ಳುವಂತೆ ಅಭಿಪ್ರಾಯ ವ್ಯಕ್ತಪಡಿಸಿದರು. ಆದರೆ, ನಾಗರೀಕ ಸೌಲಭ್ಯ ನಿವೇಶನವನ್ನು ಈಗಾಗಲೇ ಯೋಜನಾ ಪ್ರಾಧಿಕಾರಕ್ಕೆ ಹಸ್ತಾಂತರಿಸಿರುವುದಿರಂದ ಆ ನಿವೇಶನವು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಇಲ್ಲದೇ ಇರುವ ಕಾರಣ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಅಭಿಪ್ರಾಯ ಪಡೆದ ನಂತರ ಕ್ರಮಕೈಗೊಳ್ಳುವುದು ಸೂಕ್ತವೆಂದು ಅಧ್ಯಕ್ಷರು ತಿಳಿಸಿದರು. ನಂತರ, ಸದರಿ ವಿಷಯದ ಬಗ್ಗೆ ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಮಡಿಕೇರಿ ಇವರಿಗೆ ವಿವರಣೆ ನೀಡಿ, ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶದ ಹೊರಭಾಗದಲ್ಲಿರುವ ಎರಡು ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಕೋರಿ ಪತ್ರ ಬರೆಯಬೇಕೆಂದು ಹಾಗೂ ನಾಗರೀಕ ಸೌಲಭ್ಯದ ವಿಸ್ತೀರ್ಣದಲ್ಲಿ ವ್ಯತ್ಯಾಸ ಉಂಟಾಗಿರುವುದರಿಂದ ಹೆಚ್ಚುವರಿ ವಿಸ್ತೀರ್ಣವನ್ನು ಪ್ರಾಧಿಕಾರಕ್ಕೆ ತಿದ್ದುಪಡಿ ಮೂಲಕ ಹಸ್ತಾಂತರಿಸಿದ ನಂತರ ಸದರಿ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡುವಂತೆ ಹಾಗೂ ಉಳಿಕೆ ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಸದಸ್ಯಕಾರ್ಯದರ್ಶಿಯವರಿಗೆ ಸೂಚಿಸಿ ಸಭೆಯಲ್ಲಿ ನಿರ್ಣಯಿಸಲಾಯಿತು.

ಸಭೆಯ ತೀರ್ಮಾನದಂತೆ ದಿನಾಂಕ: 14–09–2023 ರಂದು ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಮಡಿಕೇರಿ ಇವರಿಗೆ ವಿವರಣೆ ನೀಡಿ, ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶದ ಹೊರಭಾಗದಲ್ಲಿರುವ ಎರಡು ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಪತ್ರ ಬರೆದು ಕೋರಲಾಗಿದೆ ಹಾಗೂ ದಿನಾಂಕ: 14–09–2023 ರಂದು ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು ಇವರಿಗೆ ವಿವರಣೆ ನೀಡಿ ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಮಾರ್ಗದರ್ಶನ ನೀಡುವಂತೆ ಪತ್ರ ಬರೆದು ಕೋರಲಾಗಿದೆ.

ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಮಡಿಕೇರಿ ಇವರು ದಿನಾಂಕ: 03–11–2023 ರ ಪತ್ರದಲ್ಲಿ ಪ್ರಸ್ತಾವಿತ ವಿನ್ಯಾಸದಲ್ಲಿರುವ ನಿವೇಶನಗಳನ್ನು ಬಿಡುಗಡೆಗೊಳಿಸುವುದು ಗ್ರಾಮಪಂಚಾಯಿತಿ ಕಾರ್ಯಾಲಯದ ವ್ಯಾಪ್ತಿಗೆ ಬರುತ್ತಿರುವುದರಿಂದ ಈ ಬಗ್ಗೆ ಸಂಬಂಧಪಟ್ಟ ಗ್ರಾಮಪಂಚಾಯಿತಿ ಕಾರ್ಯಾಲಯವನ್ನು ಸಂಪರ್ಕಿಸಲು ಅರ್ಜಿದಾರರಿಗೆ ನಿರ್ದೇಶಿಸಲು ತಿಳಿಸಲಾಗಿದೆ ಎಂಬುದಾಗಿ ತಿಳಿಸಿರುತ್ತಾರೆ.

ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು ಇವರು ದಿನಾಂಕ: 15–12–2023 ರ ಪತ್ರದಲ್ಲಿ ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಹಾಲಿ ನಿಯಮಾವಳಿಗಳಂತೆ ಅಗತ್ಯ ಕ್ರಮ ವಹಿಸಲು ಈ ಮೂಲಕ ಸೂಚಿಸಿದೆ ಎಂದು ತಿಳಿಸಿರುತ್ತಾರೆ.

ಸದಸ್ಯಕಾರ್ಯದರ್ಶಿ ಅಭಿಪ್ರಾಯ: ಟಿಪ್ಪಣಿಯಲ್ಲಿ ವಿವರಿಸಿರುವಂತೆ ಸಹಾಯಕ ನಿರ್ದೇಶಕರು, ಮಡಿಕೇರಿ ಇವರು ಪ್ರಸ್ತಾವಿತ ವಿನ್ಯಾಸದಲ್ಲಿರುವ ನಿವೇಶನಗಳನ್ನು ಬಿಡುಗಡೆಗೊಳಿಸುವುದು ಗ್ರಾಮಪಂಚಾಯಿತಿ ಕಾರ್ಯಾಲಯದ ವ್ಯಾಪ್ತಿಗೆ ಬರುತ್ತಿರುವುದರಿಂದ ಈ ಬಗ್ಗೆ ಸಂಬಂಧಪಟ್ಟ ಗ್ರಾಮಪಂಚಾಯಿತಿ ಕಾರ್ಯಾಲಯವನ್ನು ಸಂಪರ್ಕಿಸಲು ಅರ್ಜಿದಾರರಿಗೆ ನಿರ್ದೇಶಿಸುವಂತೆ ತಿಳಿಸಿರುವುದರಿಂದ ಮತ್ತು ಮಾನ್ಯ ನಿರ್ದೇಶಕರು, ಬೆಂಗಳೂರು ಇವರು ಹಾಲಿ ನಿಯಮಾವಳಿಗಳಂತೆ ಅಗತ್ಯ ಕ್ರಮ ವಹಿಸಲು ಸೂಚಿಸಿರುವುದರಿಂದ, ಸದರಿ ಎರಡು ಪತ್ರಗಳನ್ನು ಸಭೆಯ ನಿರ್ಣಯಕ್ಕೆ ಮಂಡಿಸಿದೆ.

ಚರ್ಚೆ: ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆ ಬೆಂಗಳೂರು ಇವರು ತಮ್ಮ ಪತ್ರದಲ್ಲಿ ಹಾಲಿ ನಿಯಮಾವಳಿಗಳಂತೆ ಅಗತ್ಯ ಕ್ರಮ ವಹಿಸಲು ಸೂಚಿಸಿರುವುದರಿಂದ, ಕೆ.ಟಿ.ಸಿ.ಪಿ. ಕಾಯ್ದೆಯನ್ವಯ ಉದ್ಯಾನವನಕ್ಕಾಗಿ ಕನಿಷ್ಟ ಶೇ. 10% ರಷ್ಟು ಮತ್ತು ನಾಗರೀಕ ಸೌಲಭ್ಯಕ್ಕಾಗಿ ಕನಿಷ್ಟ ಶೇ. 5% ರಷ್ಟು ನಿಗಧಿಪಡಿಸಿ ಉಳಿದ ವಿಸ್ತೀರ್ಣಕ್ಕೆ RDPR ನಿಯಮದಂತೆ ಅಳವಡಿಸಬೇಕಾಗಿರುತ್ತದೆ ಎಂದು ವಿವರಿಸಿದರು. ಆದರೆ, ಈ ಹಿಂದೆ ಅನುಮೋದನೆ ನೀಡಿರುವ ಕರಡು ವಿನ್ಯಾಸ ನಕ್ಷೆಗಳಲ್ಲಿ ನಿಯಮಾವಳಿಯಂತೆ ಶೇಕಡವಾರು ವಿಸ್ತೀರ್ಣವನ್ನು ಕಾಯ್ದಿರಿಸದೇ ಅನುಮೋದನೆ ನೀಡಲಾಗಿರುತ್ತದೆ ಎಂದು ಸದಸ್ಯಕಾರ್ಯದರ್ಶಿಯವರು ಸಭೆಗೆ ತಿಳಿಸಿದರು.

ನಿರ್ಣಯ: ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ, ಸರ್ಕಾರಕ್ಕೆ ಪತ್ರ ಬರೆದು ಮಾರ್ಗದರ್ಶನ ಪಡೆಯುವುದು ಸೂಕ್ತವೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯ ಸಂಖ್ಯೆ(06): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಕೂಡ್ಲೂರು ಗ್ರಾಮದ ಸ.ನಂ. 3/16 ರಲ್ಲಿ 3.00 ಎಕರೆ ಮತ್ತು ಸ.ನಂ. 3/17 ರಲ್ಲಿ 2.85 ಎಕರೆ ಒಟ್ಟು 5.85 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡುವಂತೆ ಹಾಗೂ ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಕೋರಿರುವ ಬಗ್ಗೆ **(ಅರ್ಜಿದಾರರು:–ಶ್ರೀಮತಿ ಸುಬ್ಬಮ್ಮ ಮತ್ತು ಶ್ರೀಮತಿ ಲಲಿತ)**

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಗ್ರಾಮಪಂಚಾಯಿತಿ ಇವರು ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿ, ಸದರಿ ಜಮೀನನ್ನು ಕರಡು ವಸತಿ ವಿನ್ಯಾಸ ನಕ್ಷೆ ಪ್ರಕಾರ ಅಭಿವೃದ್ಧಿಗೊಳಿಸಿದ್ದು, ಎಲ್ಲಾ ಮೂಲಭೂತ ಸೌಕರ್ಯಗಳನ್ನು ಮುಗಿಸಿ ಸಂಬಂಧಪಟ್ಟ ಇಲಾಖೆವತಿಯಿಂದ ಪೂರ್ವಾನುಮತಿಯನ್ನು ಪಡೆದಿರುವುದರಿಂದ ಅಂತಿಮ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುಲು ಹಾಗೂ ನಿವೇಶನಗಳನ್ನು ಬಿಡುಗಡೆ ಮಾಡಲು ಮುಂದಿನ ಕ್ರಮವಹಿಸಬೇಕೆಂದು ಕೋರಿರುತ್ತಾರೆ. ಸದರಿ ಜಮೀನಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ:

ಭೂಪರಿವರ್ತನೆ ಆದೇಶದ ವಿವರ: ಪ್ರಶ್ನಿತ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: 192503 ದಿನಾಂಕ:02–06–2021 ರಂದು ವಸತಿ (ಲೇಔಟ್) ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ.

ಮಹಾಯೋಜನೆಯನ್ವಯ ಜಮೀನಿನ ಭೂಉಪಯೋಗ: ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದೆ.

ರಸ್ತೆ ಸಂಪರ್ಕ: ಸದರಿ ಜಮೀನು ಪೂರ್ವ ದಿಕ್ಕಿನಲ್ಲಿ 5.0ಮೀ ಅಗಲದ ಮತ್ತು ಪಶ್ಚಿಮ ದಿಕ್ಕಿನಲ್ಲಿ 6.50 ಮೀ ಅಗಲದ ಗ್ರಾಮಪಂಚಾಯಿತಿ ರಸ್ತೆಯಿಂದ ಸಂಪರ್ಕಹೊಂದಿದ್ದು, ತಾತ್ಕಾಲಿಕ ವಿನ್ಯಾಸ ನಕ್ಷೆಯಲ್ಲಿ 15.0ಮೀ ಅಗಲಕ್ಕೆ ವಿಸ್ತರಿಸಲಾಗಿದೆ.

ತಾತ್ಕಾಲಿಕ ವಿನ್ಯಾಸ ನಕ್ಷೆ ಅನುಮೋದನೆ ನೀಡುವಾಗ ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಅರ್ಜಿದಾರರು ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆ, ಆರ್.ಟಿ.ಸಿ, ಮ್ಯುಟೇಷನ್ ಪ್ರತಿ, ಅಲಿನೇಷನ್ ನಕ್ಷೆ, ಆಕಾರ್ ಬಂದ್(ಉತಾರು), ಇ.ಸಿ. ಪ್ರತಿ, ಗ್ರಾಮನಕ್ಷೆ, ಕಾಂಟೂರ್ ನಕ್ಷೆ, ಸ್ಥಿರಾಸ್ತಿಯ ಕ್ರಯಪತ್ರ, ಆಧಾರ್‌ಕಾರ್ಡ್ ಮತ್ತು ಪ್ರಶ್ನಿತ ಜಮೀನುಗಳನ್ನು ಜಂಟಿಯಾಗಿ ಅಭಿವೃದ್ಧಿಪಡಿಸುವ ಬಗ್ಗೆ ಅಫಿಡೆವಿಟ್ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.

ತಾತ್ಕಾಲಿಕ ವಿನ್ಯಾಸ ನಕ್ಷೆ ಅನುಮೋದನೆ: ಪ್ರಶ್ನಿತ ಜಮೀನಿನ ತಾತ್ಕಾಲಿಕ ವಿನ್ಯಾಸ ನಕ್ಷೆಗೆ ಪ್ರಾಧಿಕಾರ ಸಭೆ ದಿನಾಂಕ:18–09–2021 ರ ನಡವಳಿಗಳ ವಿಷಯಸಂಖ್ಯೆ(10)ರ ನಿರ್ಣಯ ಮತ್ತು ದಿನಾಂಕ: 15–02–2022 ರ ನಡವಳಿಗಳ ವಿಷಯ ಸಂಖ್ಯೆ(06) ರ ನಿರ್ಣಯದನ್ವಯ ದಿನಾಂಕ:14–03–2022 ರಂದು ಅನುಮೋದನೆ ನೀಡಲಾಗಿದೆ. **(ಸದರಿ ಸಭೆಗಳ ನಡವಳಿಯ ಉದ್ಧೃತಭಾಗ ಲಗತ್ತಿಸಿದೆ).**

ತಾತ್ಕಾಲಿಕ ವಿನ್ಯಾಸ ನಕ್ಷೆಯಲ್ಲಿ ಭೂಉಪಯೋಗ ವಿಶ್ಲೇಷಣೆ ಈ ಕೆಳಕಂಡಂತೆ ಇರುತ್ತದೆ:

ಭೂಉಪಯೋಗ ವಿಶ್ಲೇಷಣೆ			
ಕ್ರ. ಸಂ	**ಭೂಉಪಯೋಗ**	**ವಿಸ್ತೀರ್ಣ (ಚ.ಮೀ ಗಳಲ್ಲಿ)**	**ಶೇಕಡ (%)**
1	ವಸತಿಗಾಗಿ	10981.21	51.08%
2	ಉದ್ಯಾನವನ ಮತ್ತು ಆಟದ ಮೈದಾನ	2151.56	10.00%
3	ನಾಗರೀಕ ಸೌಲಭ್ಯ	1075.24	5.00%
	ರಸ್ತೆಗಾಗಿ	7290.56	33.92%
	ಒಟ್ಟು	21498.58	100.00

ತಹಶೀಲ್ದಾರರು, ಕುಶಾಲನಗರ ಇವರು ದಿನಾಂಕ:18–11–2023 ರಂದು ಪತ್ರ ಬರೆದು ಕೂಡ್ಲೂರು ಗ್ರಾಮದ ನಿವಾಸಿಯಾದ ಶ್ರೀ ಬಾಲ್‌ರಾಜ್ ಬಿನ್ ಎಂ. ರಾಮಯ್ಯ ಇವರ ತಮ್ಮ ಮನೆ ಹತ್ತಿರ ಸೈಟ್ ಮಾಡಿದ್ದು ಅಲ್ಲಿಂದ ಬರುವ ನೀರು ಮನೆಯ ಮುಂಭಾಗ ಬರುವುದರಿಂದ ಅವರ ಮನೆಯಲ್ಲಿರುವ ಅಡಿಕೆ ಗಿಡ ನಾಶ ಆಗಿರುವ ಬಗ್ಗೆ ಅರ್ಜಿ ಸಲ್ಲಿಸಿದ್ದು, ಸದರಿ ಲೇಔಟ್ ಪ್ಲಾನಿಂಗ್‌ಗೆ KUDA ದಿಂದ ಅನುಮತಿ ನೀಡಿರುವುದರಿಂದ, ಸದರಿ ಪ್ರಕರಣವು ತಮ್ಮ ಇಲಾಖೆ ವ್ಯಾಪ್ತಿಗೆ ಒಳಪಡುವುದರಿಂದ, ಸ್ಥಳಪರಿಶೀಲಿಸಿ ಮುಂದಿನ ಕ್ರಮಕ್ಕೈಗೊಳ್ಳುವಂತೆ ಕೋರಿರುತ್ತಾರೆ.

ಸದರಿ ಜಮೀನಿನ ಸ್ಥಳಪರಿಶೀಲನೆಯನ್ನು ದಿನಾಂಕ:26–12–2023 ರಂದು ಮಾಡಲಾಗಿದ್ದು, ಸದರಿ ವಸತಿ ಲೇಔಟ್‌ನ ಚರಂಡಿಯಿಂದ ನೀರು ಪಕ್ಕದ ನಿವಾಸಿಯಾದ ಶ್ರೀ ಬಾಲ್‌ರಾಜ್ ಬಿನ್ ಎಂ. ರಾಮಯ್ಯ ರವರ ಮನೆಗೆ ಹರಿಯುತ್ತಿದ್ದು, ಅವರ ಅಡಿಕೆ ಗಿಡ ನಾಶವಾಗಿರುವುದು ಕಂಡುಬಂದಿರುವುದರಿಂದ, ದಿನಾಂಕ:27–12–2023 ರಂದು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಮಡಿಕೇರಿ ಇವರಿಗೆ ಪತ್ರ ಬರೆದು, ಸದರಿ ಲೇಔಟ್‌ನ ಮಾಲೀಕರು ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಕಾಮಗಾರಿಗೆ ತಮ್ಮ ಇಲಾಖೆಯಿಂದ ಕಾರ್ಯಾದೇಶವನ್ನು ಪಡೆದಿದ್ದಾರೆಯೇ? ತಮ್ಮ ಇಲಾಖೆಯ ಮಾರ್ಗದರ್ಶನದಂತೆ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯನ್ನು CPHEEO ನಿಯಮದಂತೆ ಕಾಮಗಾರಿಗಳನ್ನು ನಿರ್ವಹಿಸಿದ್ದಾರೆಯೇ? ಹಾಗೂ ಚರಂಡಿ ನೀರನ್ನು ವೈಜ್ಞಾನಿಕವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿಯಮದಂತೆ ಸಾರ್ವಜನಿಕರಿಗೆ ಯಾವುದೇ ತೊಂದರೆ ಉಂಟಾಗದಂತೆ ಕಾರ್ಯನಿರ್ವಹಿಸಿದ್ದಾರೆಯೇ ಎಂಬುದರ ಬಗ್ಗೆ ಸ್ಥಳಪರಿಶೀಲನೆ ನಡೆಸಿ, ನಿಯಮ ಉಲ್ಲಂಘಿಸಿದ್ದಲ್ಲಿ ತಮ್ಮ ಇಲಾಖೆಯಿಂದ ಸೂಕ್ತ ಕ್ರಮಕ್ಕೈಗೊಂಡು ವರದಿಯನ್ನು ಈ ಕಛೇರಿಗೆ ನೀಡಬೇಕೆಂದು ಪತ್ರ ಬರೆದು ಕೋರಲಾಗಿದೆ.

ಸದರಿ ಜಮೀನಿನ ಮಾಲೀಕರಾದ ಶ್ರೀಮತಿ ಲಲಿತ ಮತ್ತು ಶ್ರೀಮತಿ ಸುಬ್ಬಮ್ಮ ಇವರುಗಳಿಗೆ ದಿನಾಂಕ:29–12–2023 ರಂದು ನೋಟೀಸ್ ನೀಡಿ ಕರಡು ವಿನ್ಯಾಸ ನಕ್ಷೆಯನ್ನು ಅಭಿವೃದ್ಧಿಪಡಿಸುವಾಗ ಒಳಚರಂಡಿ ನೀರು ಬಾಲ್‌ರಾಜ್ ಬಿನ್ ಎಂ. ರಾಮಯ್ಯ ಇವರ ಜಮೀನಿಗೆ ಹರಿದುಹೋಗುವಂತೆ ಮಾಡಿ ಅವರ ಅಡಿಕೆ ಗಿಡ ನಾಶವಾಗಿರುವುದರ ಬಗ್ಗೆ ಹಾಗೂ ನಿಯಮ ಉಲ್ಲಂಘನೆ ಮಾಡಿರುವುದರ ಬಗ್ಗೆ ಸೂಕ್ತ ವಿವರಣೆಯನ್ನು ಈ ಪತ್ರ ತಲುಪಿದ 7 ದಿನಗಳ ಒಳಗಾಗಿ ಈ ಕಛೇರಿಗೆ ಸಲ್ಲಿಸುವಂತೆ ನೋಟೀಸ್ ನೀಡಲಾಗಿದೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಮಡಿಕೇರಿ ಇವರು ದಿನಾಂಕ:01–01–2024 ರ ಪತ್ರದಲ್ಲಿ ಸದರಿ ಬಡಾವಣೆಯಲ್ಲಿ ಕೇವಲ ಒಂದು ನಿವೇಶನದಲ್ಲಿ ಮಾತ್ರ ಮನೆ ನಿರ್ಮಾಣ ಪ್ರಗತಿಯಲ್ಲಿದ್ದು ಬಡಾವಣೆಯಲ್ಲಿ ನಿರ್ಮಿಸಿರುವ ಒಳಚರಂಡಿ ವ್ಯವಸ್ಥೆಗೆ ಯಾವುದೇ ಒಳಚರಂಡಿ ಗೃಹ ನೀಡಲು ಗೃಹಗಳೇ ಇರುವುದಿಲ್ಲ, ಪ್ರಸ್ತುತ ಬಡಾವಣೆಯಲ್ಲಿ ಯಾವುದೇ ಮನೆಗಳಿಲ್ಲದ ಕಾರಣ ಒಳಚರಂಡಿಯಿಂದ ಅಡಿಕೆ ಬೆಳೆ ನಾಶವಾಗಿರುತ್ತದೆ ಎಂದು ಹೇಳಿರುವುದು ಅಸಮಂಜಸವಾಗಿರುತ್ತದೆ, ಒಳಚರಂಡಿ ನೀರು ಹೊರಚರಂಡಿಯಲ್ಲಿ ಹರಿಯಲು ಸಾಧ್ಯವಿರುವುದಿಲ್ಲ ಹಾಗೂ ಒಳಚರಂಡಿ ನೀರಿನ ಶುದ್ಧೀಕರಣಕ್ಕಾಗಿ ಬಡಾವಣೆಯಲ್ಲಿ ನಿರ್ಮಿಸಲಾದ ತಂತ್ರಜ್ಞಾನಾಧಾರಿತ ಮಲಿನ ನೀರು ಶುದ್ದೀಕರಣ ಘಟಕಕ್ಕೆ ಜೋಡಭೆ ಮಾಡಲಾಗಿರುತ್ತದೆ, ತೆರೆದ ಚರಂಡಿ/ಹೊರಚರಂಡಿ/ಮಳೆ ನೀರಿನ ಚರಂಡಿ ನಿರ್ಮಾಣ ಮಂಡಿಳಿ ವ್ಯಾಪ್ತಿಗೆ ಬರುವುದಿಲ್ಲ ಎಂದು ತಿಳಿಸಿರುತ್ತಾರೆ. ಸದರಿ ಪತ್ರವನ್ನು ಪರಿಗಣಿಸಿ, ಸದರಿ ಜಮೀನಿನ ಸ್ಥಳಪರಿಶೀಲನೆಯನ್ನು ಮತ್ತೊಮ್ಮೆ ಮಾಡಲಾಗಿದ್ದು, ಸ್ಥಳಪರಿಶೀಲನೆಯ ವೇಳೆ ಈ ಕಛೇರಿಯಿಂದ ಅನುಮೋದನೆ ನೀಡಿರುವ ಕರಡು ವಿನ್ಯಾಸ ನಕ್ಷೆಯಂತೆ ನಿವೇಶನ ಸಂಖ್ಯೆ 6, 55, 56 ಮತ್ತು 57 ನಿವೇಶನಗಳಲ್ಲಿ ಈಗಾಗಲೇ ಕಟ್ಟಡಗಳು ನಿರ್ಮಾಣವಾಗಿದ್ದು, ಸದರಿ ಮನೆಗಳ ಒಳಚರಂಡಿ ನೀರು ಹೊರಚರಂಡಿಯ ಮೂಲಕ ಹರಿಯುತ್ತಿರುವುದು ಕಂಡುಬಂದಿರುತ್ತದೆ. ಆದ್ದರಿಂದ ಸದರಿಯವರಿಗೆ ದಿನಾಂಕ:16–01–2024

ರಂದು ಮತ್ತೊಮ್ಮೆ ಪತ್ರ ಬರೆದು ತಮ್ಮ ಇಲಾಖೆಯಿಂದ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರ ನೀಡುವ ಸಂದರ್ಭದಲ್ಲಿ ಸ್ಥಳಪರಿಶೀಲನೆ ನಡೆಸಿ ಈಗಾಗಲೇ ಇರುವ ಕಟ್ಟಡಗಳ ಮಲಿನ ನೀರನ್ನು ಪ್ರಸ್ತುತ ಬಡಾವಣೆಯ ಒಳಚರಂಡಿ ವ್ಯವಸ್ಥೆಗೆ ಸಂಪರ್ಕ ನೀಡಿದ ನಂತರ ಅರ್ಜಿದಾರರಿಗೆ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರ ನೀಡಬೇಕೆಂದು ಕೋರಲಾಗಿದೆ.

ನಂತರ, ದಿನಾಂಕ: 16–03–2022 ರಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟ್ ಉಪ–ವಿಭಾಗ, ಮಡಿಕೇರಿ ಇವರಿಗೆ ಪತ್ರ ಬರೆದು ಸದರಿ ವಸತಿ ಬಡಾವಣೆಯನ್ನು ಅಭಿವೃದ್ಧಿಪಡಿಸಿರುವ ಬಗ್ಗೆ ತಮ್ಮ ಇಲಾಖೆಯಿಂದ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರ ನೀಡುವ ಸಂದರ್ಭದಲ್ಲಿ ಸ್ಥಳಪರಿಶೀಲನೆ ನಡೆಸಿ ಈಗಾಗಲೇ ಇರುವ ಕಟ್ಟಡಗಳ ಮಲಿನ ನೀರನ್ನು ಪ್ರಸ್ತುತ ಬಡಾವಣೆಯ ಒಳಚರಂಡಿ ವ್ಯವಸ್ಥೆಗೆ ಸಂಪರ್ಕ ನೀಡಿದ ನಂತರ ಅರ್ಜಿದಾರರಿಗೆ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರ ನೀಡಬೇಕೆಂದು ಕೋರಲಾಗಿದೆ. ಸದರಿಯವರು ವಿಷಯದ ವ್ಯಾಪ್ತಿಯು ಕುಶಾಲನಗರ ತಾಲ್ಲೂಕು ವ್ಯಾಪ್ತಿಗೆ ಬರುವುದರಿಂದ ಸದರಿ ಪತ್ರವನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಉಪವಿಭಾಗ, ಸೋಮವಾರಪೇಟೆ ರವರಿಗೆ ಸಲ್ಲಿಸುವ ಸಂಬಂಧ ತಮಗೆ ಹಿಂದುರುಗಿಸಲಾಗಿದೆ ಎಂಬುದಾಗಿ ತಿಳಿಸಿ ಮೂಲ ಪತ್ರವನ್ನು ದಿನಾಂಕ: 23–01–2024 ರಂದು ಹಿಂದಿರುಗಿಸಿರುತ್ತಾರೆ. ಆದ್ದರಿಂದ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಉಪವಿಭಾಗ, ಸೋಮವಾರಪೇಟೆ ಇವರಿಗೆ ಮತ್ತೊಮ್ಮೆ ಪತ್ರ ಬರೆದು, ಸದರಿ ವಸತಿ ಬಡಾವಣೆಯನ್ನು ಅಭಿವೃದ್ಧಿಪಡಿಸಿರುವ ಬಗ್ಗೆ ತಮ್ಮ ಕಛೇರಿಯಿಂದ ಮುಕ್ತಾಯ ಪ್ರಮಾಣ ಪತ್ರ ನೀಡುವ ಸಂದರ್ಭದಲ್ಲಿ ಸ್ಥಳಪರಿಶೀಲನೆ ನಡೆಸಿ ಈಗಾಗಲೇ ಇರುವ ಕಟ್ಟಡಗಳ ಮಲಿನ ನೀರನ್ನು ಪ್ರಸ್ತುತ ಬಡಾವಣೆಯ ಒಳಚರಂಡಿ ವ್ಯವಸ್ಥೆಗೆ ಸಂಪರ್ಕ ನೀಡಿದ ನಂತರ ಅರ್ಜಿದಾರರಿಗೆ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರ ನೀಡಬೇಕೆಂದು ಕೋರಲಾಗಿದೆ.

ಸದರಿ ಜಮೀನಿನ ಮಾಲೀಕರುಗಳು ದಿನಾಂಕ: 09–02–2023ರ ಪತ್ರದಲ್ಲಿ ಈ ಕಛೇರಿಯ ನೋಟೀಸ್‌ಗೆ ಉತ್ತರವನ್ನು ಸಲ್ಲಿಸಿದ್ದು, ಮಳೆ ನೀರಿನ ಚರಂಡಿಯಲ್ಲಿ ಮಳೆ ನೀರು ಹೋಗದಂತೆ ಶ್ರೀಯುತ ಬಾಲ್‌ರಾಜ್ ಬಿನ್ ಎಂ.ರಾಮಯ್ಯ ರವರ ಜಮೀನಿನಿಂದ 2 ಅಡಿ ಬಿಟ್ಟು ಅಡ್ಡಲಾಗಿ ರಸ್ತೆಗೆ ಮತ್ತು ಮಳೆ ನೀರಿನ ಚರಂಡಿಯಲ್ಲಿ ತಡೆಗೋಡೆಯನ್ನು ಹಾಗೂ ಇಗ್ಗು ಗಂಡಿಯನ್ನು ನಿರ್ಮಾಣ ಮಾಡಿರುವುದಾಗಿ ತಿಳಿಸಿರುತ್ತಾರೆ. ಸದರಿ ಜಮೀನಿನ ಸ್ಥಳಪರಿಶೀಲನೆಯನ್ನು ಮಾಡಿದ್ದು, ಜಮೀನಿನ ಮಾಲೀಕರು ತಡೆಗೋಡೆ ನಿರ್ಮಿಸಿರುವುದು ಕಂಡುಬಂದಿದೆ.

ದಿನಾಂಕ: 07–02–2024 ರಂದು ಕೂಡುಮಂಗಳೂರು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರು ಸಂಬಂಧಪಟ್ಟ ಇಲಾಖೆಯಿಂದ ಪೂರ್ವಾನುಮತಿ ಪಡೆದಿರುವುದರಿಂದ ಲೇಔಟ್ ಅನ್ನು ಪರಿಶೀಲನೆ ಮಾಡಿ ಮುಂದಿನ ಕ್ರಮವಹಿಸಬೇಕಾಗಿ ಪತ್ರ ಬರೆದಿರುತ್ತಾರೆ. ಪತ್ರದೊಂದಿಗೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಸೋಮವಾರಪೇಟೆ ಇವರ ಮುಕ್ತಾಯ ಪ್ರಮಾಣ ಪತ್ರ, ಸೆಸ್ಕಾಂ ಕುಶಾಲನಗರ ಇವರ ಮುಕ್ತಾಯ ಪ್ರಮಾಣ ಪತ್ರಗಳನ್ನು ಸಲ್ಲಿಸಿರುತ್ತಾರೆ. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಮಡಿಕೇರಿ ಇವರ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರ ಹಾಗೂ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಸೋಮವಾರಪೇಟೆ ಇವರ ಮುಕ್ತಾಯ ಪ್ರಮಾಣ ಪತ್ರ ದಿನಾಂಕ:07–03–2024 ರಂದು ಈ ಕಛೇರಿಯಲ್ಲಿ ಸ್ವೀಕೃತಗೊಂಡಿರುತ್ತದೆ.

ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಸೋಮವಾರಪೇಟೆ ಇವರು ದಿನಾಂಕ:28–02–2024 ರ ಪತ್ರದಲ್ಲಿ ಸದರಿ ಲೇಔಟ್‌ನಲ್ಲಿ ನಿರ್ಮಿಸಿರುವ ಚರಂಡಿ, ಮೋರಿ ಮತ್ತು ರಸ್ತೆ ಕಾಮಗಾರಿಯನ್ನು ಪರಿಶೀಲಿಸಿದಾಗ ಸುಸ್ಥಿತಿಯಲ್ಲಿದ್ದು, ಕಾಮಗಾರಿ ಮುಕ್ತಾಯ ದೃಢೀಕರಣ ಮಾತ್ರ ನಮ್ಮ ಇಲಾಖೆಯಿಂದ ನೀಡಿದ್ದು, ಅರ್ಜಿದಾರರು ನೀಡಿರುವ ದೂರಿನಂತೆ ನಕ್ಷೆಯನ್ನು

ತಯಾರಿಸುವುದಾಗಲೀ, ತದನಂತರದಲ್ಲಿ ನಕ್ಷೆಯನ್ನು ಬದಲಾವಣೆಗೊಳಿಸುವುದಾಗಲೇ ನಮ್ಮ ಇಲಾಖಾ ಸುಪರ್ದಿಗೆ ಬರುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಮಡಿಕೇರಿ ಇವರು ದಿನಾಂಕ:11–03–2024 ರ ಪತ್ರದಲ್ಲಿ ನಾಲ್ಕು ನಿವೇಶನಗಳಲ್ಲಿ ಕಟ್ಟಡ ನಿರ್ಮಾಣ ಮಾಡಲಾಗಿದ್ದು, ಅದರಲ್ಲಿ 3 ಮನೆಗಳಿಂದ ಯಾವುದೇ ತ್ಯಾಜ್ಯ ನೀರು ಹೊರಚರಂಡಿಗೆ ಹರಿಸಿರುವುದಿಲ್ಲ ನಿ.ಸಂ.57 ರ ಮನೆಯಿಂದ Grey water ನ್ನು ಹೊರಚರಂಡಿಗೆ ಹರಿಸಿದ್ದು, ಈ ಕೂಡಲೇ ಸ್ಥಗಿತಗೊಳಿಸಲು ಸೂಚಿಸಲಾಗಿದ್ದು ಹಾಗೂ ಸಂಪರ್ಕವನ್ನು Grey water ಬಡಾವಣೆಯ ಒಳಚರಂಡಿ ಸಂಪರ್ಕಕ್ಕೆ ಜೋಡಭೆ ಮಾಡಲು ಸೂಚಿಸಲಾಗಿದೆ ಎಂದು ತಿಳಿಸಿರುತ್ತಾರೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶಕ್ಕೆ ರೂಪಿಸಿರುವ ಮಹಾಯೋಜನೆಯ ವಲಯ ನಿಯಮಾವಳಿಗಳನ್ವಯ ಬಹುನಿವೇಶನ ವಸತಿ ವಿನ್ಯಾಸ ನಕ್ಷೆಗೆ ಶೇಕಡಾವಾರು ಕನಿಷ್ಟ ಭೂಉಪಯೋಗಗಳು: ಉದ್ಯಾನವನಕ್ಕಾಗಿ ಕನಿಷ್ಟ ಶೇ. 10% ರಷ್ಟು ಮತ್ತು ನಾಗರೀಕ ಸೌಲಭ್ಯಕ್ಕಾಗಿ ಕನಿಷ್ಟ ಶೇ. 5% ರಷ್ಟು ನಿಗಧಿಪಡಿಸಲಾಗಿದೆ.

ಸ್ಥಳಪರಿಶೀಲನೆ ವಿವರ: ದಿನಾಂಕ:16–02–2024, ದಿನಾಂಕ:26–02–2024 ರಂದು ಮತ್ತು ದಿನಾಂಕ: 05–03–2024 ರಂದು ಸದರಿ ಜಮೀನಿನ ಸ್ಥಳ ಪರಿಶೀಲಿಸಲಾಗಿದೆ ಮತ್ತು ಎಲ್ಲಾ ನಿವೇಶನಗಳ ಅಳತೆಯನ್ನು ಮಾಡಲಾಗಿದೆ. ಅನುಮೋದಿತ ಕರಡು ವಿನ್ಯಾಸ ನಕ್ಷೆಯಲ್ಲಿರುವ ನಿವೇಶನಗಳ ಅಳತೆಗಳಿಗೂ, ಸ್ಥಳದಲ್ಲಿರುವ ನಿವೇಶನಗಳ ಅಳತೆಗಳಿಗೂ ವ್ಯತ್ಯಾಸ ಕಂಡುಬಂದಿರುತ್ತದೆ. ಕರಡು ವಿನ್ಯಾಸ ನಕ್ಷೆಯಲ್ಲಿ ಎಡಭಾಗದಲ್ಲಿ 9.0ಮೀ ಅಗಲಕ್ಕೆ ರಸ್ತೆಯನ್ನು ಅಳವಡಿಸಲಾಗಿದೆ, ಆದರೆ ಸ್ಥಳದಲ್ಲಿ ಕೇವಲ 6.0ಮೀ ಅಗಲಕ್ಕೆ ಮಾತ್ರ ರಸ್ತೆಯನ್ನು ಅಭಿವೃದ್ಧಿಪಡಿಸಿರುತ್ತಾರೆ ಹಾಗೂ ರಸ್ತೆಯ ಇಕ್ಕೆಲಗಳಲ್ಲಿ ಮಳೆನೀರು ಚರಂಡಿಯನ್ನು ನಿರ್ಮಿಸಿರುತ್ತಾರೆ. ಸದರಿ ರಸ್ತೆಯು ಉತ್ತರ ದಿಕ್ಕಿನಲ್ಲಿರುವ ಸ.ನಂ. 3/1 ರ ಜಮೀನಿಗೆ ಮುಂದುವರೆಯುತ್ತಿದ್ದು, ಸ.ನಂ. 3/1ರ ಜಮೀನಿನ ಭೂಪರಿವರ್ತನೆಗೆ ಕೋರಿದಲ್ಲಿ, 9.0ಮೀ ಅಗಲಕ್ಕೆ ರಸ್ತೆಯನ್ನು ನಿಗಧಿಪಡಿಸಿ ಅಭಿಪ್ರಾಯ ನೀಡಬೇಕಾಗಿರುತ್ತದೆ. ಈ ಸಂದರ್ಭದಲ್ಲಿ ರಸ್ತೆ ಪಂಕ್ತೀಕರಣದಲ್ಲಿ ವ್ಯತ್ಯಾಸ ಉಂಟಾಗುತ್ತದೆ. ಅಲ್ಲದೆ ಸ.ನಂ. 3/1ರ ಜಮೀನಿನ ಮಾಲೀಕರು ಒತ್ತುವರಿ ಮಾಡಿರುವುದರಿಂದ ನಿವೇಶನಗಳ ಅಳತೆಗಳಲ್ಲಿ ವ್ಯತ್ಯಾಸ ಕಂಡುಬಂದಿರುತ್ತದೆ. ಕರಡು ವಿನ್ಯಾಸ ನಕ್ಷೆಯಂತೆ ಕನಿಷ್ಟ ಶೇ.5% ರಷ್ಟು ವಿಸ್ತೀರ್ಣವನ್ನು ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಬೇಕಾಗಿರುತ್ತದೆ ಆದರೆ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿರುವ ಜಾಗವು ಕೂಡ ಒತ್ತುವರಿಯಾಗಿರುತ್ತದೆ. ಸದರಿ ರಸ್ತೆಯ ಬಲಭಾಗದಲ್ಲಿರುವ ನಿ.ಸಂ. 55 ಮತ್ತು 56 ಗಳಲ್ಲಿ ಈಗಾಗಲೇ ಅನುಮತಿ ಪಡೆಯದೇ ಕಟ್ಟಡಗಳನ್ನು ನಿರ್ಮಿಸಿರುತ್ತಾರೆ ಹಾಗೂ ಭೂಪರಿವರ್ತನೆ ಸಮಯದಲ್ಲಿ ಈ ಮನೆಗಳಿಗೆ ಯಾವುದೇ ದಂಡ ಪಾವತಿಸಿರುವುದಿಲ್ಲ.

ನಿವೇಶನ ಸಂಖ್ಯೆ 55, 56 ಮತ್ತು 57 ರಲ್ಲಿ ಈಗಾಗಲೇ ಕಟ್ಟಡ ನಿರ್ಮಿಸಿದ್ದು, ಕಟ್ಟಡಗಳ ಮಲಿನ ನೀರನ್ನು ಪ್ರಸ್ತುತ ಬಡಾವಣೆಯ ಒಳಚರಂಡಿ ವ್ಯವಸ್ಥೆಗೆ ಸಂಪರ್ಕ ಕಲ್ಪಿಸುವುದು ಸೂಕ್ತವಾಗಿರುತ್ತದೆ ಹಾಗೂ ಸದರಿ ನಿವೇಶನಗಳಿಗೆ ಅಂತಿಮ ಅನುಮೋದನೆ ನೀಡುವಾಗ ಬಿಡುಗಡೆ ಆದೇಶ ಪ್ರತಿಯಲ್ಲಿ ಚೆಕ್ಕುಬಂದಿಗಳನ್ನು ನಮೂದಿಸಬೇಕಾಗಿದೆ. ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿರುವ ಜಾಗವು ಒತ್ತುವರಿಯಾಗಿರುವುದರಿಂದ, ಕರಡು ವಿನ್ಯಾಸ ನಕ್ಷೆಯಂತೆ ಕನಿಷ್ಟ ಶೇ.5% ರಷ್ಟು ವಿಸ್ತೀರ್ಣವನ್ನು ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಬೇಕಾಗಿದೆ. ಅಲ್ಲದೆ, ನಿವೇಶನ ಸಂಖ್ಯೆ 42, 49, 50 ರ ಜಾಗದಲ್ಲೂ ಸಹ ಒತ್ತುವರಿಯಾಗಿರುತ್ತದೆ. ಈ ಒತ್ತುವರಿಯ ಜಾಗವನ್ನು ತೋರಿಸಿರುವ ನಕ್ಷೆಯನ್ನು ಸಭೆಗೆ ಮಂಡಿಸಿದೆ. ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಸದರಿ ಕರಡು ನಕ್ಷೆಯನ್ನು ಪರಿಷ್ಕರಿಸಿ, ಪರಿಷ್ಕೃತ ಕರಡು ನಕ್ಷೆಗೆ ಅನುಮೋದನೆ ನೀಡುವುದು ಸೂಕ್ತವಾಗಿರುತ್ತದೆ. ಸದರಿ ವಿಷಯವನ್ನು ಸಭೆಗೆ ಮಂಡಿಸಿದೆ.

ನಿರ್ಣಯ: ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಿ, ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯವನ್ನು ಪರಿಗಣಿಸಲಾಯಿತು. ಸ್ಥಳದಲ್ಲಿ ರಸ್ತೆಯನ್ನು ಕೇವಲ 6.0ಮೀ ಅಗಲಕ್ಕೆ ಅಳವಡಿಸಿರುವುದರಿಂದ ಮತ್ತು ಸದರಿ ಜಮೀನಿನ ಭೂಪರಿವರ್ತನೆ ಸಂದರ್ಭದಲ್ಲಿ ಜಮೀನಿನಲ್ಲಿ ಈಗಾಗಲೇ ಕಟ್ಟಡ ನಿರ್ಮಿಸಿರುವುದಕ್ಕೆ ಯಾವುದೇ ದಂಡ ಪಾವತಿಸದೇ ಇರುವುದರಿಂದ, ಭೂಪರಿವರ್ತನೆ ನಂತರ ಅನುಮತಿ ಪಡೆಯದೇ ನಿವೇಶನ ಸಂಖ್ಯೆ 55, 56 ಮತ್ತು 57 ರಲ್ಲಿ ಕಟ್ಟಡಗಳನ್ನು ನಿರ್ಮಿಸಿರುವುದರಿಂದ ಇಂತಹ ಸಂದರ್ಭದಲ್ಲಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡುವುದು ಸೂಕ್ತವಾಗಿರುವುದಿಲ್ಲವೆಂದು ಅಭಿಪ್ರಾಯಿಸಿ. ಸದರಿ ಪ್ರಸ್ತಾವನೆಯನ್ನು ತಿರಸ್ಕರಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯ ಸಂಖ್ಯೆ(07): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಗುಮ್ಮನಕೊಲ್ಲಿ ಗ್ರಾಮದ ಸ.ನಂ. 37/4 ರಲ್ಲಿ 1.65 ಎಕರೆ ಪೈಕಿ 1.50 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡುವಂತೆ ಹಾಗೂ ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಕೋರಿರುವ ಬಗ್ಗೆ (**ಅರ್ಜಿದಾರರು:– ಶ್ರೀ ಈಶ್ವರನ್ ಜವಾಹರ್, ಇ. ರಾಜಾವೆಲ್ ಮತ್ತು ಇ. ಕಾರ್ತಿವೆಲ್**)

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ ಇವರು ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿ, ಸದರಿ ವಸತಿ ವಿನ್ಯಾಸ ನಕ್ಷೆಯಲ್ಲಿ ಎಲ್ಲಾ ಅಭಿವೃದ್ಧಿ ಕಾರ್ಯಗಳು ಪೂರ್ಣಗೊಂಡಿರುವ ಬಗ್ಗೆ ದೃಢೀಕರಣಪತ್ರವನ್ನು ಸಲ್ಲಿಸಿರುವುದರಿಂದ ಅಂತಿಮ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುಲು ಹಾಗೂ ನಿವೇಶನಗಳನ್ನು ಬಿಡುಗಡೆ ಮಾಡಲು ಮುಂದಿನ ಕ್ರಮವಹಿಸಬೇಕೆಂದು ಕೋರಿರುತ್ತಾರೆ. ಸದರಿ ಜಮೀನಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ:

ಭೂಪರಿವರ್ತನೆ ಆದೇಶದ ವಿವರ: ಪ್ರಶ್ನಿತ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: 238335 ದಿನಾಂಕ: 10–12–2021 ರಂದು ವಸತಿ (ಲೇಔಟ್) ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ.

ಮಹಾಯೋಜನೆಯನ್ವಯ ಜಮೀನಿನ ಭೂಉಪಯೋಗ: ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದೆ.

ರಸ್ತೆ ಸಂಪರ್ಕ: ಸದರಿ ಜಮೀನು ಉತ್ತರ ದಿಕ್ಕಿನಲ್ಲಿ 5.60ಮೀ ಅಗಲದ ಗ್ರಾಮಪಂಚಾಯಿತಿ ರಸ್ತೆಯಿಂದ ಸಂಪರ್ಕಹೊಂದಿದ್ದು, ತಾತ್ಕಾಲಿಕ ವಿನ್ಯಾಸ ನಕ್ಷೆಯಲ್ಲಿ ಮಹಾಯೋಜನೆಯಂತೆ 15.0ಮೀ ಅಗಲಕ್ಕೆ ವಿಸ್ತರಿಸಲಾಗಿದೆ.

ತಾತ್ಕಾಲಿಕ ವಿನ್ಯಾಸ ನಕ್ಷೆ ಅನುಮೋದನೆ ನೀಡುವಾಗ ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಅರ್ಜಿದಾರರು ಇ.ಸಿ. ಪ್ರತಿ, ಮ್ಯುಟೇಷನ್ ಪ್ರತಿ, ಆರ್.ಟಿ.ಸಿ, ಅಲಿನೇಷನ್ ನಕ್ಷೆ, ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆ, ಗ್ರಾಮನಕ್ಷೆ, ಕಾಂಟೂರ್ ನಕ್ಷೆ, ಕ್ರಯಪತ್ರ, ಆಧಾರ್‌ಕಾರ್ಡ್ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.

ತಾತ್ಕಾಲಿಕ ವಿನ್ಯಾಸ ನಕ್ಷೆ ಅನುಮೋದನೆ: ಪ್ರಶ್ನಿತ ಜಮೀನಿನ ತಾತ್ಕಾಲಿಕ ವಿನ್ಯಾಸ ನಕ್ಷೆಗೆ ಪ್ರಾಧಿಕಾರ ಸಭೆ ದಿನಾಂಕ:16–09–2022 ರ ನಡವಳಿಗಳ ವಿಷಯಸಂಖ್ಯೆ(07)ರ ನಿರ್ಣಯದನ್ವಯ ದಿನಾಂಕ: 30–09–2022 ರಂದು ಅನುಮೋದನೆ ನೀಡಲಾಗಿದೆ.

ತಾತ್ಕಾಲಿಕ ವಿನ್ಯಾಸ ನಕ್ಷೆಯಲ್ಲಿ ಭೂಉಪಯೋಗ ವಿಶ್ಲೇಷಣೆ ಈ ಕೆಳಕಂಡಂತೆ ಇರುತ್ತದೆ:

ಭೂಉಪಯೋಗ ವಿಶ್ಲೇಷಣೆ			
ಕ್ರ. ಸಂ	ಭೂಉಪಯೋಗ	ವಿಸ್ತೀರ್ಣ (ಚ.ಮೀ ಗಳಲ್ಲಿ)	ಶೇಕಡ (%)
1	ವಸತಿ	3283.566	54.09
2	ಉದ್ಯಾನವನ ಮತ್ತು ಆಟದ ಮೈದಾನ	606.583	10.00
3	ನಾಗರೀಕ ಸೌಲಭ್ಯ	303.537	5.00
4	ರಸ್ತೆಗಾಗಿ	1876.014	30.91
	ಒಟ್ಟು	6069.700	100.00

ನಿವೇಶನಗಳ ವಿವರ		
ಕ್ರ. ಸಂ	ನಿವೆಶನದ ಅಳತೆ (ಮೀಟರ್ ಗಳಲ್ಲಿ)	ನಿವೇಶನಗಳ ಸಂಖ್ಯೆ
1	12.0 X 18.0	01
2	9.0 X ಅನಿಯತ	15
3	ಅನಿಯತ ನಿವೇಶನಗಳು (ಅ)	07
	ಒಟ್ಟು	23

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶಕ್ಕೆ ರೂಪಿಸಿರುವ ಮಹಾಯೋಜನೆಯ ವಲಯ ನಿಯಮಾವಳಿಗಳನ್ವಯ ಬಹುನಿವೇಶನ ವಸತಿ ವಿನ್ಯಾಸ ನಕ್ಷೆಗೆ ಶೇಕಡಾವಾರು ಕನಿಷ್ಟ ಭೂಉಪಯೋಗಗಳು: ಉದ್ಯಾನವನ ಮತ್ತು ಆಟದ ಮೈದಾನಕ್ಕಾಗಿ ಕನಿಷ್ಟ ಶೇ. 10% ರಷ್ಟು ಮತ್ತು ನಾಗರೀಕ ಸೌಲಭ್ಯಕ್ಕಾಗಿ ಕನಿಷ್ಟ ಶೇ. 5% ರಷ್ಟು ನಿಗಧಿಪಡಿಸಲಾಗಿದೆ.

ಸ್ಥಳಪರಿಶೀಲನೆ ವಿವರ: ದಿನಾಂಕ: 04–03–2024 ರಂದು ಸದರಿ ಜಮೀನಿನ ಸ್ಥಳ ಪರಿಶೀಲಿಸಲಾಗಿದೆ ಮತ್ತು ಎಲ್ಲಾ ನಿವೇಶನಗಳ ಅಳತೆಯನ್ನು ಮಾಡಲಾಗಿದೆ. ತಾತ್ಕಾಲಿಕ ವಿನ್ಯಾಸ ನಕ್ಷೆಯಲ್ಲಿ ಎರಡು ನಾಗರೀಕ ಸೌಲಭ್ಯ ನಿವೇಶನಗಳಿದ್ದು, ಇದಕ್ಕೆ ಕೇವಲ ಕಂಬಗಳನ್ನು ಮಾತ್ರ ನೆಟ್ಟು ಉದ್ಯಾನವನದಿಂದ ಬೇರ್ಪಡಿಸಿರುತ್ತಾರೆ. ಉದ್ಯಾನವನಕ್ಕೆ Fencing ಅಳವಡಿಸಿರುವುದಿಲ್ಲ. ಜಮೀನಿನಲ್ಲಿ ವಿದ್ಯುತ್ ಕಂಬಗಳು ಹಾಗೂ ತಂತಿ ಮಾರ್ಗಗಳನ್ನು ಮಾತ್ರ ಅಳವಡಿಸಲಾಗಿದ್ದು, ಬೀದಿ ದೀಪಗಳನ್ನು ಅಳವಡಿಸದೇ ಇರುವುದು ಕಂಡುಬಂದಿದೆ. ಸದರಿ ಜಮೀನಿನ ಪೂರ್ವ ದಿಕ್ಕಿನಲ್ಲಿರುವ 12.0ಮೀ ಅಗಲದ ರಸ್ತೆಯು ಪಕ್ಕದ ಸ.ನಂ. 38/14 ರ ಅನುಮೋದಿತ ಅಣ್ಣೇಗೌಡ ಬಡಾವಣೆ ರಸ್ತೆಗೆ ಮುಂದುವರೆದಿರುತ್ತದೆ. ಈ ಎರಡೂ ರಸ್ತೆಗಳಿಗೆ ಅಡ್ಡಲಾಗಿ (perpendicular) ಮಳೆನೀರು ಚರಂಡಿ ಕಂಡುಬಂದಿರುತ್ತದೆ. ಅಣ್ಣೇಗೌಡ ಬಡಾವಣೆಯ ರಸ್ತೆಯು ಕೇವಲ 11.3ಮೀ ಅಗಲಕ್ಕೆ ಅಭಿವೃದ್ಧಿಸಿರುವುದು ಕಂಡುಬಂದಿರುತ್ತದೆ. ಇದರಿಂದ ರಸ್ತೆ ಜೋಡಣೆ ಮಾಡುವಾಗ ರಸ್ತೆಯ ಅಗಲಗಳಲ್ಲಿ ವ್ಯತ್ಯಾಸ ಉಂಟಾಗಿದ್ದು, ಎರಡು ರಸ್ತೆಗಳ ಇಕ್ಕೆಲಗಳಲ್ಲಿರುವ ಮಳೆ ನೀರಿನ ಚರಂಡಿಗಳು ಜೋಡಣೆಯಾಗಿರುವುದಿಲ್ಲ. ಸದರಿ ಎರಡು ರಸ್ತೆಗಳು ಜೋಡಣೆ ಆಗುವಂತೆ ಸ್ಥಳದಲ್ಲಿ ಅಭಿವೃದ್ದಿಪಡಿಸಬೇಕಿದೆ. ಅಲ್ಲದೆ ಅಣ್ಣೇಗೌಡ ಬಡಾವಣೆಯ ಮಾಲೀಕರು ಸದರಿ ರಸ್ತೆಗೆ ಅಡ್ಡಲಾಗಿ ದೊಡ್ಡ ಮರದ ದಿಮ್ಮಿಯನ್ನು ಇರಿಸಿದ್ದು, ರಸ್ತೆ ಸಂಪರ್ಕ ಕಡಿತಗೊಂಡಿರುವುದು ಕಂಡುಬಂದಿದೆ.

ಮುಖ್ಯಾಧಿಕಾರಿ, ಪುರಸಭೆಗೆ ಇವರು ತಮ್ಮ ಮೇಲ್ವಿಚಾರಣೆಯಲ್ಲಿ ಕಾಮಗಾರಿಗಳನ್ನು ಕೈಗೊಂಡಿರುವುದಾಗಿ ತಿಳಿಸಿ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರವನ್ನು ನೀಡಿರುತ್ತಾರೆ. ಆದ್ದರಿಂದ ದಿನಾಂಕ: 04–03–2024 ರಂದು ಮುಖ್ಯಾಧಿಕಾರಿಗಳಿಗೆ ಪತ್ರ ಬರೆದು ತಮ್ಮ ಮೇಲ್ವಿಚಾರಣೆಯಲ್ಲಿ ಸದರಿ ರಸ್ತೆಯನ್ನು 12.0ಮೀ ಅಗಲಕ್ಕೆ ವಿಸ್ತರಿಸಿ, ರಸ್ತೆಗೆ ಅಡ್ಡಲಾಗಿ ನಿರ್ಮಿಸಿರುವ ಮಳೆನೀರು ಚರಂಡಿಯ ಮೇಲೆ ಹಾದುಹೋಗುವಂತೆ ರಸ್ತೆಯನ್ನು ಅಭಿವೃದ್ಧಿಪಡಿಸಿದ ನಂತರ ತಾವು ಮತ್ತೊಮ್ಮೆ ಸದರಿ ಜಮೀನಿನ ಸ್ಥಳಪರಿಶೀಲನೆಯನ್ನು ನಡೆಸಿ, ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರವನ್ನು ನೀಡುವಂತೆ ಹಾಗೂ ಪಕ್ಕದ ಸ.ನಂ. 38/14 ರ ಅಣ್ಣೇಗೌಡ ಬಡಾವಣೆಯ ಮಾಲೀಕರಾದ ವಿ.ಎ. ಪುಟ್ಟರಾಜ್ ಇವರು 12.0ಮೀ ಅಗಲದ ರಸ್ತೆಗೆ ಅಡ್ಡಲಾಗಿ ಇರಿಸಿರುವ ದೊಡ್ಡ ಮರದ ದಿಮ್ಮಿಯನ್ನು ತೆರವುಗೊಳಿಸಲು ಕ್ರಮವಹಿಸುವಂತೆ ತಿಳಿಸಲಾಗಿದೆ.

ಮುಂದುವರೆದು, ಅಣ್ಣೇಗೌಡ ಬಡಾವಣೆಯ ಮಾಲೀಕರು ರಸ್ತೆಯನ್ನು ಸ್ಥಳೀಯ ಸಂಸ್ಥೆಗೆ ಈಗಾಗಲೇ ಹಸ್ತಾಂತರಿಸಿದ್ದು, ಸಾರ್ವಜನಿಕ ರಸ್ತೆಗಳಿಗೆ ಅಡ್ಡಲಾಗಿ ಯಾವುದೇ ತಡೆಗೋಡೆಗಳನ್ನು ನಿರ್ಮಿಸದೇ ಸಾರ್ವಜನಿಕರ ಉಪಯೋಗಕ್ಕೆ ಮುಕ್ತವಾಗಿಡಬೇಕಾಗಿರುವುದರಿಂದ ಅಣ್ಣೇಗೌಡ

ಬಡಾವಣೆಯ ಮಾಲೀಕರಿಗೆ ದಿನಾಂಕ:04–03–2024 ರಂದು ನೋಟೀಸ್ ನೀಡಿ ವಸತಿ ಬಡಾವಣೆಯಲ್ಲಿ 12.0ಮೀ ಅಗಲದ ರಸ್ತೆಗೆ ಅಡ್ಡಲಾಗಿ ದೊಡ್ಡ ಮರದ ದಿಮ್ಮಿಯನ್ನು ಇರಿಸಿರುವ ಬಗ್ಗೆ ಸೂಕ್ತ ಕಾರಣವನ್ನು ಈ ಪತ್ರ ತಲುಪಿದ 7 ದಿನಗಳ ಒಳಗಾಗಿ ಈ ಕಛೇರಿಗೆ ಸಲ್ಲಿಸುವಂತೆ ಹಾಗೂ ರಸ್ತೆ ಸಂಪರ್ಕ ಕಡಿತಗೊಂಡಿರುವುದರಿಂದ ಮರದ ದಿಮ್ಮಿಯನ್ನು ಈ ಕೂಡಲೇ ತೆರವುಗೊಳಿಸಬೇಕೆಂದು ಸೂಚಿಸಲಾಗಿದೆ.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಕುಶಾಲನಗರ ಇವರು ದೃಢೀಕರಣ ಪತ್ರದಲ್ಲಿ ಜಮೀನಿನಲ್ಲಿ ವಿದ್ಯುತ್ ಮೂಲಭೂತ ಸೌಕರ್ಯದ ಕಾಮಗಾರಿಯನ್ನು ಸ್ವಯಂ ಕಾರ್ಯಗತ ಯೋಜನೆಯಡಿಯಲ್ಲಿ ಕೈಗೊಂಡು ಪೂರ್ಣಗೊಳಿಸಿರುತ್ತಾರೆ ತಿಳಿಸಿರುತ್ತಾರೆ. ಆದ್ದರಿಂದ ಸದರಿಯವರಿಗೆ ದಿನಾಂಕ:04–03–2024 ರಂದು ಪತ್ರ ಬರೆದು, ತಾವು ಮತ್ತೊಮ್ಮೆ ಸದರಿ ಜಮೀನಿನ ಸ್ಥಳಪರಿಶೀಲನೆಯನ್ನು ನಡೆಸಿ, ಅರ್ಜಿದಾರರು ಬೀದಿದೀಪಗಳನ್ನು ಅಳವಡಿಸಿದ ನಂತರ ಕಾಮಗಾರಿ ಮುಕ್ತಾಯ ದೃಢೀಕರಣ ಪತ್ರವನ್ನು ನೀಡಬೇಕೆಂದು ಕೋರಲಾಗಿದೆ.

ಅರ್ಜಿದಾರರು ಸದರಿ ಜಮೀನಿನ ಇತ್ತೀಚಿನ ಆರ್.ಟಿ.ಸಿ, ಮ್ಯುಟೇಷನ್ ಪ್ರತಿ, ಇತ್ತೀಚಿನ ಇ.ಸಿ. ಪ್ರತಿ, ಸಾಮಾನ್ಯ ಅಧಿಕಾರ ಪತ್ರ ಮತ್ತು ಆಧಾರ್‌ಕಾರ್ಡ್ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ. ಸಲ್ಲಿಸಿರುವ ಆರ್.ಟಿ.ಸಿ ಯಲ್ಲಿ ಗುಮ್ಮನಕೊಲ್ಲಿ ಗ್ರಾಮದ ಸ.ನಂ.37/4 ರ ಒಟ್ಟು ವಿಸ್ತೀರ್ಣ 1.65 ಎಕರೆ ಜಮೀನು ಈ. ಜವಾಹರ್, ಈ. ರಾಜವೆಲ್ ಮತ್ತು ಏ. ಕಾರ್ತಿವೆಲ್ ರವರ ಜಂಟಿ ಮಾಲೀಕತ್ವದಲ್ಲಿರುತ್ತದೆ. ಆದರೆ ಸಲ್ಲಿಸಿರುವ ಕ್ರಯಪತ್ರದಲ್ಲಿ ಈ ಮೂರೂ ಮಾಲೀಕರ ಹೆಸರಿಗೆ ಮಾರಾಟಗಾರರು ಕೇವಲ 1.5 ಎಕರೆ ವಿಸ್ತೀರ್ಣಕ್ಕೆ ಮಾರಾಟ ಮಾಡಿರುತ್ತಾರೆ. MR H 13 2021-22 ರ ಮ್ಯುಟೇಷನ್ ಪ್ರತಿಯಲ್ಲಿ ಈ ಹಿಂದೆ ಸದರಿ ಜಮೀನಿನ ಮಾಲೀಕರು ಪ್ರಾ.ಕೃ.ಪ.ಸ.ಸಂ.ನಿ ಇವರಲ್ಲಿ 38000 ಋಣವಿದ್ದು, ಸಲ್ಲಿಸಿರುವ MR T 38 ರಲ್ಲಿ ಹಕ್ಕು ಮತ್ತು ಋಣ ಬಿಡುಗಡೆ ಹೊಂದಿರುವುದು ನಮೂದಾಗಿರುತ್ತದೆ. ಆದರೆ ಅರ್ಜಿದಾರರು ಹಕ್ಕು ಬಿಡುಗಡೆ ಪತ್ರವನ್ನು ಸಲ್ಲಿಸಿರುವುದಿಲ್ಲ.

ಅಂತಿಮ ವಿನ್ಯಾಸ ನಕ್ಷೆಯಲ್ಲಿ ವಸತಿ ಉದ್ದೇಶಕ್ಕೆ 3283.566 ಚ.ಮೀ (ಶೇ.54.09%), ಉದ್ಯಾನವನ ಮತ್ತು ಆಟದಮೈದಾನಕ್ಕೆ 606.583 ಚ.ಮೀ (ಶೇ.10.00%), ನಾಗರೀಕ ಸೌಲಭ್ಯಕ್ಕಾಗಿ 303.537 ಚ.ಮೀ (ಶೇ.5.00%), ಮತ್ತು ರಸ್ತೆಗಾಗಿ 1876.014 ಚ.ಮೀ (ಶೇ.30.91%) ವಿಸ್ತೀರ್ಣದ ಜಮೀನನ್ನು ಕಾಯ್ದಿರಿಸಲಾಗಿದೆ. ಸದರಿ ವಿನ್ಯಾಸ ನಕ್ಷೆಯಲ್ಲಿನ ರಸ್ತೆ ಮತ್ತು ಉದ್ಯಾನವನಕ್ಕೆ ಕಾಯ್ದಿರಿಸಿದ ಜಮೀನನ್ನು ಸ್ಥಳೀಯ ಸಂಸ್ಥೆಗೆ ಹಾಗೂ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಜಮೀನನ್ನು ಯೋಜನಾ ಪ್ರಾಧಿಕಾರಕ್ಕೆ ಪರಿತ್ಯಾಜನ ಪತ್ರದ ಮುಖೇನ ಹಸ್ತಾಂತರಿಸಿದ ನಂತರ ಅಂತಿಮ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದಾಗಿದೆ ಹಾಗೂ ಶೇ. 100 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಬಹುದಾಗಿದೆ. ವಿಷಯವನ್ನು ಸಭೆಯ ನಿರ್ಣಯಕ್ಕೆ ಮಂಡಿಸಿದೆ.

ನಿರ್ಣಯ: ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಸಲ್ಲಿಸಿರುವ ಆರ್.ಟಿ.ಸಿ ಯಲ್ಲಿ ಗುಮ್ಮನಕೊಲ್ಲಿ ಗ್ರಾಮದ ಸ.ನಂ.37/4ರ ಒಟ್ಟು ವಿಸ್ತೀರ್ಣ 1.65 ಎಕರೆ ನಮೂದಾಗಿರುವುದನ್ನು ಪರಿಗಣಿಸಬಹುದಾಗಿದೆ ಎಂದು ಸಭೆಯಲ್ಲಿ ಅಭಿಪ್ರಾಯಿಸಲಾಯಿತು. ವಿನ್ಯಾಸ ನಕ್ಷೆಯಲ್ಲಿರುವ ಎರಡು ನಾಗರೀಕ ಸೌಲಭ್ಯ ನಿವೇಶನಗಳಿಗೆ ಮತ್ತು ಉದ್ಯಾನವನಕ್ಕೆ Fencing ಅಳವಡಿಸಿದ ನಂತರ ಹಾಗೂ ಬೀದಿ ದೀಪಗಳನ್ನು ಅಳವಡಿಸಿ, ರಸ್ತೆಗೆ ಅಡ್ಡಲಾಗಿ ಇರಿಸಿರುವ ದೊಡ್ಡ ಮರದ ದಿಮ್ಮಿಯನ್ನು ತೆರವುಗೊಳಿಸಿದ ನಂತರ ಮತ್ತು ಅರ್ಜಿದಾರರು ಹಕ್ಕು ಬಿಡುಗಡೆ ಪತ್ರವನ್ನು ಸಲ್ಲಿಸಿದ ನಂತರ, ವಿನ್ಯಾಸ ನಕ್ಷೆಯಲ್ಲಿನ ರಸ್ತೆ ಮತ್ತು ಉದ್ಯಾನವನಕ್ಕೆ ಕಾಯ್ದಿರಿಸಿದ ಜಮೀನನ್ನು ಸ್ಥಳೀಯ ಸಂಸ್ಥೆಗೆ ಹಾಗೂ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಜಮೀನನ್ನು ಯೋಜನಾ ಪ್ರಾಧಿಕಾರಕ್ಕೆ ಪರಿತ್ಯಾಜನ ಪತ್ರದ ಮುಖೇನ ಹಸ್ತಾಂತರಿಸಿದ ನಂತರ ಹಾಗೂ ಸದರಿ ವಿನ್ಯಾಸದ ಯೋಜನೆಯನ್ನು ರೇರಾ ಪ್ರಾಧಿಕಾರದಲ್ಲಿ ನೋಂದಣಿ ಮಾಡಿಸಿರುವ ಬಗ್ಗೆ ನೋಂದಣಿ ಪತ್ರವನ್ನು ಸಲ್ಲಿಸಿದ ನಂತರ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ

ನೀಡಬಹುದೆಂದು ಮತ್ತು ಎಲ್ಲಾ ನಿವೇಶನಗಳನ್ನು ಬಿಡುಗಡೆಗೊಳಿಸಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯ ಸಂಖ್ಯೆ(08): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮುಳ್ಳುಸೋಗೆ ಗ್ರಾಮದ ಸ.ನಂ. 31/1 ರಲ್ಲಿ 2.17 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿರುವ ಬಗ್ಗೆ **(ಅರ್ಜಿದಾರರು:–ಶ್ರೀಎಂ.ಕೆ. ಮಂಜುನಾಥ್ ಬಿನ್ ಎಂ.ಎನ್. ಕೃಷ್ಣಪ್ಪ)**

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ ಇವರು ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿ, ಮುಳ್ಳುಸೋಗೆ ಗ್ರಾಮದ ಸ.ನಂ. 31/1 ರಲ್ಲಿ 2.17 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ.
ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸದರಿ ಜಮೀನಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ:

ಭೂಪರಿವರ್ತನೆ ಆದೇಶದ ವಿವರ: ಪ್ರಶ್ನಿತ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: 557036 ದಿನಾಂಕ: 19–12–2023 ರಲ್ಲಿ ವಸತಿ (ಲೇಔಟ್) ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ.

ಮಹಾಯೋಜನೆಯನ್ವಯ ಜಮೀನಿನ ಭೂಉಪಯೋಗ: ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದೆ.

ರಸ್ತೆ ಸಂಪರ್ಕ: ಸದರಿ ಜಮೀನು ದಕ್ಷಿಣ ದಿಕ್ಕಿನಲ್ಲಿ ಹಾಲಿ 10.0ಮೀ ಅಗಲದ ರಸ್ತೆಯಿಂದ ಸಂಪರ್ಕಹೊಂದಿದ್ದು, ಮಹಾಯೋಜನೆಯಲ್ಲಿ 18.0ಮೀ ಅಗಲೀಕರಣಕ್ಕೆ ಪ್ರಸ್ತಾವಿಸಲಾಗಿದೆ.

ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆ, ಅಲಿನೇಷನ್ ನಕ್ಷೆ, ಆರ್.ಟಿ.ಸಿ, ಮ್ಯುಟೇಷನ್ ಪ್ರತಿ, ಸ್ಥಿರಾಸ್ಥಿಯ ವಿಭಾಗಪತ್ರ, ಆಕಾರ್ ಬಂದ್(ಉತಾರು), ಉತ್ತಾರು ನಕ್ಷೆ, ಇ.ಸಿ. ಪ್ರತಿ, ಗ್ರಾಮನಕ್ಷೆ, ಜಮೀನಿನ ಕಾಂಟೂರ್ ನಕ್ಷೆ ದಾಖಲಾತಿಗಳನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಸದರಿ ಜಮೀನಿನ ಸ್ಥಳಪರೀಲನೆಯನ್ನು ದಿನಾಂಕ: 16–02–2024 ರಂದು ಮಾಡಲಾಗಿದೆ. ಪ್ರಶ್ನಿತ ಜಮೀನು ಅನುಮೋದಿತ ಮಹಾಯೋಜನೆಯಂತೆ ವಸತಿ ವಲಯದಲ್ಲಿದ್ದು, ದಕ್ಷಿಣ ದಿಕ್ಕಿನಲ್ಲಿ ಹಾಲಿ 10.0ಮೀ ಅಗಲದ ರಸ್ತೆಯಿಂದ ಸಂಪರ್ಕಹೊಂದಿದ್ದು, ಮಹಾಯೋಜನೆಯಲ್ಲಿ 18.0ಮೀ ಅಗಲೀಕರಣಕ್ಕೆ ಪ್ರಸ್ತಾವಿಸಲಾಗಿದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆಯಂತೆ ಹಾಗೂ ಕಾಂಟೂರ್ ನಕ್ಷೆಯಂತೆ ವಿನ್ಯಾಸದಲ್ಲಿ ಸುತ್ತಳತೆ ಹಾಗೂ ಎಲ್ಲೆಯನ್ನು ನಿಗಧಿಪಡಿಸಿ ಅರ್ಜಿದಾರರು ಕರಡು ವಿನ್ಯಾಸ ನಕ್ಷೆಯನ್ನು ಸಲ್ಲಿಸಿರುತ್ತಾರೆ. ಆದರೆ ಕರಡು ವಿನ್ಯಾಸ ನಕ್ಷೆಯಲ್ಲಿ S.T.P ಗೆ ಯಾವುದೇ ವ್ಯವಸ್ಥೆಯನ್ನು ಮಾಡಿರುವುದಿಲ್ಲ. ಹಾಲಿ ಇರುವ ಬಡಾವಣೆಯ ತಗ್ಗು ಪ್ರದೇಶದಲ್ಲಿ S.T.P ಅನ್ನು ಅಳವಡಿಸಬೇಕಾಗಿರುತ್ತದೆ. ಅರ್ಜಿದಾರರು ವಿನ್ಯಾಸ ನಕ್ಷೆಯನ್ನು ಅಭಿವೃದ್ದಿಪಡಿಸುವಾಗ ನೇರವಾಗಿ ಒಳಚರಂಡಿ ವ್ಯವಸ್ಥೆಗೆ ಸಂಪರ್ಕ ಕಲ್ಪಿಸುವುದಾಗಿ ತಿಳಿಸಿರುತ್ತಾರೆ.

ವಲಯ ನಿಯಮಾವಳಿಯನ್ವಯ ಬಹು–ನಿವೇಶನ ವಸತಿ ವಿನ್ಯಾಸ ನಕ್ಷೆಯಲ್ಲಿ ಉದ್ಯಾನವನಕ್ಕಾಗಿ ಕನಿಷ್ಟ ಶೇ. 10% ರಷ್ಟು ಮತ್ತು ನಾಗರೀಕ ಸೌಲಭ್ಯಕ್ಕಾಗಿ ಕನಿಷ್ಟ ಶೇ. 5% ರಷ್ಟು ಭೂಉಪಯೋಗಗಳನ್ನು ನಿಗಧಿಪಡಿಸಬೇಕಾಗಿರುತ್ತದೆ. ಕರಡು ವಿನ್ಯಾಸ ನಕ್ಷೆಯಲ್ಲಿ ಈ ಕೆಳಕಂಡಂತೆ ಭೂಉಪಯೋಗಗಳನ್ನು ನಿಗಧಿಪಡಿಸಲಾಗಿದೆ.

ಭೂಉಪಯೋಗ ವಿಶ್ಲೇಷಣೆ			
ಕ್ರ. ಸಂ	ಭೂಉಪಯೋಗ	ವಿಸ್ತೀರ್ಣ (ಚ.ಮೀ ಗಳಲ್ಲಿ)	ಶೇಕಡ (%)
1	ವಸತಿ	4634.82	52.77
2	ವಾಣಿಜ್ಯ	158.88	01.81
3	ಉದ್ಯಾನವನ	879.27	10.01
4	ನಾಗರೀಕ ಸೌಲಭ್ಯ	439.10	05.00
5	ರಸ್ತೆಗಾಗಿ	2669.60	30.41
	ಒಟ್ಟು	8781.67	100.00

ನಿವೇಶನಗಳ ವಿವರ		
ಕ್ರ. ಸಂ	ನಿವೆಶನದ ಅಳತೆ (ಮೀಟರ್ ಗಳಲ್ಲಿ)	ನಿವೇಶನಗಳ ಸಂಖ್ಯೆ
1	9.0 X 12.0	02
2	9.0 X ಅನಿಯತ	08
3	12.0 X ಅನಿಯತ	05
4	ಅನಿಯತ (ಅ)	12
	ಒಟ್ಟು	27

ಸದರಿ ಕರಡು ವಿನ್ಯಾಸ ನಕ್ಷೆಯು ಅನುಮೋದಿತ ವಲಯ ನಿಯಮಾವಳಿಯಂತೆ ತಾಳೆ ಹೊಂದುತ್ತಿದ್ದು, ವಲಯ ನಿಯಮಾವಳಿಯ ಅಧ್ಯಾಯ 34(ಎ) ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17(2ಎ) ರನ್ವಯ ಸದರಿ ಜಮೀನಿನ ವಸತಿ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಬಹುದಾಗಿದ್ದು, ವಿಷಯವನ್ನು ಸಭೆಯ ನಿರ್ಣಯಕ್ಕೆ ಮಂಡಿಸಿದೆ.

ನಿರ್ಣಯ: ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಅರ್ಜಿದಾರರು ವಿನ್ಯಾಸ ನಕ್ಷೆಯನ್ನು ಅಭಿವೃದ್ದಿಪಡಿಸುವಾಗ S.T.P ಅನ್ನು ನೇರವಾಗಿ ಒಳಚರಂಡಿ ವ್ಯವಸ್ಥೆಗೆ ಸಂಪರ್ಕ ಕಲ್ಪಿಸುವುದಾಗಿ ತಿಳಿಸಿರುವುದರಿಂದ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಮಡಿಕೇರಿ ಇವರಿಗೆ ಪತ್ರ ಬರೆದು ವಿನ್ಯಾಸವನ್ನು ಅಭಿವೃದ್ಧಿಪಡಿಸುವಾಗ S.T.P ಅನ್ನು ನೇರವಾಗಿ ಒಳಚರಂಡಿ ವ್ಯವಸ್ಥೆಗೆ ಸಂಪರ್ಕ ಕಲ್ಪಿಸಿಕೊಳ್ಳುವುದರ ಬಗ್ಗೆ ಮಾಹಿತಿ ಪಡೆದ ನಂತರ, ಸದರಿ ಯೋಜನೆಯನ್ನು ರೇರಾ ಪ್ರಾಧಿಕಾರದಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಸುವ ಷರತ್ತಿಗೊಳಪಡಿಸಿ ತಾತ್ಕಾಲಿಕ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು

ವಿಷಯ ಸಂಖ್ಯೆ(09): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಗುಮ್ಮನಕೊಲ್ಲಿ ಗ್ರಾಮದ ಸ.ನಂ. 36/4 ರಲ್ಲಿ 1.00 ಎಕರೆ, ಸ.ನಂ. 36/6 ರಲ್ಲಿ 0.08 ಎಕರೆ, ಸ.ನಂ. 37/1 ರಲ್ಲಿ 1.00 ಎಕರೆ, ಸ.ನಂ. 37/2 ರಲ್ಲಿ 1.20 ಎಕರೆ ಮತ್ತು ಸ.ನಂ. 37/6 ರಲ್ಲಿ 0.52.50 ಒಟ್ಟು 3.80.50 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿರುವ ಬಗ್ಗೆ **(ಅರ್ಜಿದಾರರು:–ಶ್ರೀ.ಪಿ. ಸಂಜಯ್ ಬಿನ್ ಪ್ರಭಾಕರ್)**

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ ಇವರು ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿ, ಗುಮ್ಮನಕೊಲ್ಲಿ ಗ್ರಾಮದ ಸ.ನಂ. 36/4 ರಲ್ಲಿ 1.00 ಎಕರೆ, ಸ.ನಂ. 36/6 ರಲ್ಲಿ 0.08 ಎಕರೆ, ಸ.ನಂ. 37/1 ರಲ್ಲಿ 1.00 ಎಕರೆ, ಸ.ನಂ. 37/2 ರಲ್ಲಿ 1.20 ಎಕರೆ ಮತ್ತು ಸ.ನಂ. 37/6 ರಲ್ಲಿ 0.52.50 ಒಟ್ಟು 3.80.50 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ.
ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸದರಿ ಜಮೀನಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ:

ಭೂಪರಿವರ್ತನೆ ಆದೇಶದ ವಿವರ: ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ಪ್ರಶ್ನಿತ ಜಮೀನುಗಳನ್ನು ಕೆಳಕಂಡ ಅಧಿಕೃತ ಜ್ಞಾಪನ ಪತ್ರಗಳಲ್ಲಿ ಕ್ರಮವಾಗಿ ವಸತಿ(ಲೇಔಟ್) ಉದ್ದೇಶಕ್ಕೆ ಭೂಪರಿವರ್ತಿಸಿ ಆದೇಶಿಸಿರುತ್ತಾರೆ.

1) ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: 409012 ದಿನಾಂಕ: 16–11–2022
2) ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: 4090113 ದಿನಾಂಕ: 16–11–2022
3) ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: 409011 ದಿನಾಂಕ: 16–11–2022
4) ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: 417214 ದಿನಾಂಕ: 03–12–2022
5) ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: 409013 ದಿನಾಂಕ: 16–11–2022

ಮಹಾಯೋಜನೆಯನ್ವಯ ಜಮೀನಿನ ಭೂಉಪಯೋಗ: ಪ್ರಶ್ನಿತ ಜಮೀನುಗಳು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದೆ.

ರಸ್ತೆ ಸಂಪರ್ಕ: ಸ.ನಂ. 37/7 ಹಾಗೂ 37/1 ರ ಜಮೀನುಗಳ ಉತ್ತರ ದಿಕ್ಕಿನಲ್ಲಿ ಹಾಲಿ 5.5ಮೀ ಅಗಲದ ಗ್ರಾಮಪಂಚಾಯಿತಿ ರಸ್ತೆಯಿಂದ ಸಂಪರ್ಕಹೊಂದಿದ್ದು, ಮಹಾಯೋಜನೆಯಲ್ಲಿ 15.0ಮೀ ಅಗಲೀಕರಣಕ್ಕೆ ಪ್ರಸ್ತಾವಿಸಲಾಗಿದೆ.

ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಪ್ರಶ್ನಿತ ಜಮೀನುಗಳ ಸ್ಥಿರಾಸ್ಥಿಯ ಕ್ರಯಪತ್ರಗಳು, ಇತ್ತೀಚಿನ ಇ.ಸಿ. ಪ್ರತಿಗಳು, ಆಕಾರ್ ಬಂದ್(ಉತಾರು), ಉತ್ತಾರು ನಕ್ಷೆ, ಅಲಿನೇಷನ್ ನಕ್ಷೆ, ಆರ್.ಟಿ.ಸಿ, ಮ್ಯುಟೇಷನ್ ಪ್ರತಿಗಳು, ಅಫಿಡೆವಿಟ್, ಕಾಂಟೂರು ನಕ್ಷೆ, ಆಧಾರ್‌ಕಾರ್ಡ್, ಗ್ರಾಮನಕ್ಷೆ ಮತ್ತು ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆ ದಾಖಲಾತಿಗಳನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಸದರಿ ಜಮೀನುಗಳ ಸ್ಥಳಪರೀಲನೆಯನ್ನು ದಿನಾಂಕ: 06–03–2024 ರಂದು ಮಾಡಲಾಗಿದೆ. ಅರ್ಜಿದಾರರು ಸದರಿ ಜಮೀನುಗಳನ್ನು ಒಟ್ಟುಗೂಡಿಸಿ ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆಯುವುದಾಗಿ ಹಾಗೂ ಅಭಿವೃದ್ಧಿಪಡಿಸುವುದಾಗಿ ಅಫಿಡೆವಿಟ್ ಸಲ್ಲಿಸಿರುತ್ತಾರೆ. ಪ್ರಶ್ನಿತ ಜಮೀನುಗಳು ಅನುಮೋದಿತ ಮಹಾಯೋಜನೆಯಂತೆ ವಸತಿ ವಲಯದಲ್ಲಿದೆ. ಸ.ನಂ. 37/7 ಹಾಗೂ 37/1 ರ ಜಮೀನುಗಳ ಉತ್ತರ ದಿಕ್ಕಿನಲ್ಲಿ ಹಾಲಿ 5.5ಮೀ ಅಗಲದ ಗ್ರಾಮಪಂಚಾಯಿತಿ ರಸ್ತೆಯಿಂದ ಸಂಪರ್ಕಹೊಂದಿದ್ದು, ಮಹಾಯೋಜನೆಯಲ್ಲಿ 15.0ಮೀ ಅಗಲೀಕರಣಕ್ಕೆ ಪ್ರಸ್ತಾವಿಸಲಾಗಿದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆಯಂತೆ ಹಾಗೂ ಕಾಂಟೂರ್ ನಕ್ಷೆಯಂತೆ ವಿನ್ಯಾಸದಲ್ಲಿ ಸುತ್ತಳತೆ ಹಾಗೂ ಎಲ್ಲೆಯನ್ನು ನಿಗಧಿಪಡಿಸಿ ಅರ್ಜಿದಾರರು ಕರಡು ವಿನ್ಯಾಸ ನಕ್ಷೆಯನ್ನು ಸಲ್ಲಿಸಿರುತ್ತಾರೆ. ವಲಯ ನಿಯಮಾವಳಿಯನ್ವಯ ಬಹು–ನಿವೇಶನ ವಸತಿ ವಿನ್ಯಾಸ ನಕ್ಷೆಯಲ್ಲಿ ಉದ್ಯಾನವನಕ್ಕಾಗಿ ಕನಿಷ್ಟ ಶೇ. 10% ರಷ್ಟು ಮತ್ತು ನಾಗರೀಕ ಸೌಲಭ್ಯಕ್ಕಾಗಿ ಕನಿಷ್ಟ ಶೇ. 5% ರಷ್ಟು ಭೂಉಪಯೋಗಗಳನ್ನು ನಿಗಧಿಪಡಿಸಬೇಕಾಗಿರುತ್ತದೆ. ಕರಡು ವಿನ್ಯಾಸ ನಕ್ಷೆಯಲ್ಲಿ ಈ ಕೆಳಕಂಡಂತೆ ಭೂಉಪಯೋಗಗಳನ್ನು ನಿಗಧಿಪಡಿಸಲಾಗಿದೆ.

ಭೂಉಪಯೋಗ ವಿಶ್ಲೇಷಣೆ			
ಕ್ರ. ಸಂ	ಭೂಉಪಯೋಗ	ವಿಸ್ತೀರ್ಣ (ಚ.ಮೀ ಗಳಲ್ಲಿ)	ಶೇಕಡ (%)
1	ವಸತಿ	8415.36	54.65
2	ಉದ್ಯಾನವನ	1547.95	10.05
3	ನಾಗರೀಕ ಸೌಲಭ್ಯ	773.97	05.02
4	ರಸ್ತೆಗಾಗಿ	4742.21	30.28
	ಒಟ್ಟು	15398.28	100.00

ನಿವೇಶನಗಳ ವಿವರ		
ಕ್ರ. ಸಂ	ನಿವೆಶನದ ಅಳತೆ (ಮೀಟರ್ ಗಳಲ್ಲಿ)	ನಿವೇಶನಗಳ ಸಂಖ್ಯೆ
1	9.0 X 12.0	36
2	9.0 X ಅನಿಯತ	26
3	ಅನಿಯತ (ಅ)	12
	ಒಟ್ಟು	74

ಪ್ರಸ್ತಾಪಿತ ಜಮೀನು ಹಾಲಿ 5.5ಮೀ ಅಗಲದ ಗ್ರಾಮಪಂಚಾಯಿತಿ ರಸ್ತೆಯಿಂದ ಸಂಪರ್ಕಹೊಂದಿದ್ದು, ಮಹಾಯೋಜನೆಯಲ್ಲಿ 15.0ಮೀ ಅಗಲೀಕರಣಕ್ಕೆ ಪ್ರಸ್ತಾವಿಸಲಾಗಿದೆ. ಆದ್ದರಿಂದ ಸಲ್ಲಿಸಿರುವ ನಕ್ಷೆಯಲ್ಲಿ ಪ್ರಸ್ತಾಪಿತ 15.0 ಮೀ ರಸ್ತೆಗೆ hierarchy ಯ ಪ್ರಕಾರ 12.0ಮೀ ಅಗಲದ ರಸ್ತೆಗೆ ಸಂಪರ್ಕ ಕಲ್ಪಿಸುವುದು ಸೂಕ್ತವಾಗಿರುತ್ತದೆ. ಆದ್ದರಿಂದ ವಿಷಯವನ್ನು ಸಭೆಗೆ ಮಂಡಿಸಿದೆ.

ನಿರ್ಣಯ: ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಿ, ಸಭೆಗೆ ಮಂಡಿಸಿರುವ ವಿನ್ಯಾಸ ನಕ್ಷೆಯನ್ನೇ ಪರಿಗಣಿಸಿ ಸದರಿ ಯೋಜನೆಯನ್ನು ರೇರಾ ಪ್ರಾಧಿಕಾರದಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಸುವ ಷರತ್ತಿಗೊಳಪಡಿಸಿ ಕರಡು ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯ ಸಂಖ್ಯೆ(10): ಕುಶಾಲನಗರ ಪುರಸಭೆ ವ್ಯಾಪ್ತಿಯ, 2ನೇ ಬ್ಲಾಕ್, ಸ.ನಂ. 214, 214/ಪಿ1, 211/6ಪಿ1, 211/6ಪಿ2, 211/6ಪಿ3 (ನಾಗಪ್ಪಶೆಟ್ಟಿ ಬಡಾವಣೆ) ರಲ್ಲಿನ ನಿವೇಶನ ಸಂಖ್ಯೆ 36 ರ 145.6 ಚ.ಮೀ ನಿವೇಶನದ ವಿಸ್ತೀರ್ಣ ತಿದ್ದುಪಡಿ ಮಾಡಿಕೊಡುವಂತೆ ಕೋರಿರುವ ಬಗ್ಗೆ (**ಅರ್ಜಿದಾರರು:– ಶ್ರೀ ಮೊಹಮ್ಮದ್ ಕಲೀಂವುಲ್ಲಾ ಬಿನ್ ಮೊಹಮ್ಮದ್ ಅಬ್ಬಾಸ್**)

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಕುಶಾಲನಗರ ಪುರಸಭೆ ವ್ಯಾಪ್ತಿಯ, 2ನೇ ಬ್ಲಾಕ್, ಸ.ನಂ. 214, 214/ಪಿ1, 211/6ಪಿ1, 211/6ಪಿ2, 211/6ಪಿ3 (ನಾಗಪ್ಪಶೆಟ್ಟಿ ಬಡಾವಣೆ) ರಲ್ಲಿನ ನಿವೇಶನ ಸಂಖ್ಯೆ 36 ರ 145.6 ಚ.ಮೀ ನಿವೇಶನದ ವಿಸ್ತೀರ್ಣ ತಿದ್ದುಪಡಿ ಮಾಡಿಕೊಡುವಂತೆ ಅರ್ಜಿದಾರರು ಕೋರಿದನ್ವಯ ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ ಇವರು ಈ ಕಛೇರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ.

ಪರಿಶೀಲಿಸಲಾಗಿ, ಸದರಿ ನಿವೇಶನವು ಮುಳ್ಳುಸೋಗೆ ಗ್ರಾಮದ ಸ.ನಂ. 214, 214/ಪಿ1, 211/6ಪಿ1, 211/6ಪಿ2, 211/6ಪಿ ರಲ್ಲಿನ ಒಟ್ಟು 7.95 ಎಕರೆ ವಿಸ್ತೀರ್ಣದ ವಸತಿ ವಿನ್ಯಾಸ ನಕ್ಷೆಯಲ್ಲಿನ ನಿವೇಶನವಾಗಿದ್ದು, ಸದರಿ ವಿನ್ಯಾಸ ನಕ್ಷೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರ. ಸಂ	ದಿನಾಂಕ	ವಿವರ	ಒಟ್ಟು ನಿವೇಶನಗಳ ಸಂಖ್ಯೆ	ಷರಾ
1	03–09–2013	ಈ ಕಛೇರಿಯಿಂದ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿದೆ (ಕಾರ್ಯರೂಪಕ್ಕೆ ತರಲು ಅನುಮೋದನೆ ನೀಡಿದೆ)	104 ನಿವೇಶನಗಳು	ಸರ್ಕಾರದ ಸಂಖ್ಯೆ: ನಅಇ:599: ಮೈಲಿಪ್ರಾ:2012 ದಿ:03–12–2012 ರನ್ವಯ ಶೇಕಡಾ 40%, 30% ಮತ್ತು 30% ರಂತೆ ನಿವೇಶನ ಬಿಡುಗಡೆಗೊಳಿಸುವ ಷರತ್ತು ವಿಧಿಸಲಾಗಿದೆ
2.	01–01–2015	ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ ಇವರು ಮಾರ್ಪಡಿತ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ.	–	ಯಾವುದೇ ನಿವೇಶನಗಳನ್ನು ಬಿಡುಗಡೆ ಗೊಳಿಸಿರುವುದಿಲ್ಲ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಲಾಗಿದೆ ಎಂದು ಮುಖ್ಯಾಧಿಕರಿಗಳು ಪತ್ರದಲ್ಲಿ ತಿಳಿಸಿರುತ್ತಾರೆ.
2	10–02–2015	ಈ ಕಛೇರಿಯಿಚಿದ ಮಾರ್ಪಡಿತ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿದೆ (ಕಾರ್ಯರೂಪಕ್ಕೆ ತರಲು ಅನುಮೋದನೆ ನೀಡಿದೆ)	105 ನಿವೇಶನಗಳು	ಸರ್ಕಾರ ಸುತ್ತೋಲೆ ಸಂ: ನಇ 08 ಟಿಟಿಪಿ 2013 ದಿ:24–05–2014 ರನ್ವಯ ವಿನ್ಯಾಸವನ್ನು ಅಭಿವೃದ್ಧಿಪಡಿಸಿದ ನಂತರ ಹಚಿತ ಹಚಿತವಾಗಿ ಬಿಡುಗಡೆ ಗೊಳಿಸಲಾಗುವುದು ಎಂದು ಷರತ್ತು ವಿಧಿಸಲಾಗಿದೆ.
3	19–09–2015	ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ ಇವರು ವಿನ್ಯಾಸ ನಕ್ಷೆಗೆ ತಿದ್ದುಪಡಿ ಮಾಡಿರುವುದರಿಂದ	–	–

		ಮತ್ತೊಮ್ಮೆ ಮಾರ್ಪಡಿತ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ.		
4	**13–10–2015**	ಈ ಕಛೇರಿಯಿಂದ ಮತ್ತೊಮ್ಮೆ ಮಾರ್ಪಡಿತ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿದೆ (ಕಾರ್ಯರೂಪಕ್ಕೆ ತರಲು ಅನುಮೋದನೆ ನೀಡಿದೆ)	112 ನಿವೇಶನಗಳು	ಸರ್ಕಾರ ಸುತ್ತೋಲೆ ಸಂ: ನಇ 08 ಟಿಟಿಪಿ 2013 ದಿ:24–05–2014 ರನ್ವಯ ವಿನ್ಯಾಸವನ್ನು ಅಭಿವೃದ್ಧಿಪಡಿಸಿದ ನಂತರ ಹಂತ ಹಂತವಾಗಿ ಬಿಡುಗಡೆ ಗೊಳಿಸಲಾಗುವುದು ಎಂದು ಷರತ್ತು ವಿಧಿಸಲಾಗಿದೆ.
5	**28–06–2016**	ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ ಇವರು ಈ ವಿನ್ಯಾಸ ನಕ್ಷೆಯನ್ನು ತಿದ್ದುಪಡಿ ಮಾಡಲಾಗಿರುವುದರಿಂದ ಮತ್ತೊಮ್ಮೆ ಮಾರ್ಪಡಿತ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ.	–	–
6	**29–06–2016**	ಈ ಕಛೇರಿಯಿಂದ ಮತ್ತೊಮ್ಮೆ ಮಾರ್ಪಡಿತ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿದೆ (ಕಾರ್ಯರೂಪಕ್ಕೆ ತರಲು ಅನುಮೋದನೆ ನೀಡಿದೆ)	110 ನಿವೇಶನಗಳು	ಸರ್ಕಾರ ಸುತ್ತೋಲೆ ಸಂ: ನಇ 08 ಟಿಟಿಪಿ 2013 ದಿ:24–05–2014 ರನ್ವಯ ವಿನ್ಯಾಸವನ್ನು ಅಭಿವೃದ್ಧಿಪಡಿಸಿದ ನಂತರ ಹಂತ ಹಂತವಾಗಿ ಬಿಡುಗಡೆ ಗೊಳಿಸಲಾಗುವುದು ಎಂದು ಷರತ್ತು ವಿಧಿಸಲಾಗಿದೆ.
7	**21–03–2019**	ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ ಇವರು ಸದರಿ ಬಡಾವಣೆಯಲ್ಲಿ ಈಗಾಗಲೇ ಶೇ.40 ರಷ್ಟು ನಿವೇಶನಗಳು ಬಿಡುಗಡೆಗೊಳಿಸಿದ್ದು, ಉಳಿಕೆ ಎಲ್ಲಾ ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಕೋರಿರುತ್ತಾರೆ	–	ಶೇ.40% ರಷ್ಟು ನಿವೇಶನಗಳನ್ನು ಪಟ್ಟಣಪಂಚಾಯಿತಿ ವತಿಯಿಂದಲೇ ಬಿಡುಗಡೆಗೊಳಿಸಿದ್ದು, ಈ ಬಗ್ಗೆ ಪ್ರಾಧಿಕಾರಕ್ಕೆ ಮಾಹಿತಿ ಇರುವುದಿಲ್ಲ.

ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ಇವರು ದಿನಾಂಕ:19–09–2020 ರಂದು ಈ ಕಛೇರಿಗೆ ಪತ್ರ ಬರೆದು ಸದರಿ ಬಡಾವಣೆಯಲ್ಲಿನ ನಿವೇಶನಗಳನ್ನು ಈ ಹಿಂದೆ ಪಟ್ಟಣಪಂಚಾಯಿತಿಯಿಂದ ಬಿಡುಗಡೆ ಗೊಳಿಸಲಾಗಿರುತ್ತದೆ ಹಾಗೂ ಸದರಿ ಬಡಾವಣೆಯಲ್ಲಿ ರಸ್ತೆ, ಪಾರ್ಕ್ ಮತ್ತು ಸಾರ್ವಜನಿಕ ಉದ್ದೇಶಕ್ಕೆ ಮೀಸಲಿರಿಸಿದ ನಿವೇಶನಗಳನ್ನು ಪಟ್ಟಣ ಪಂಚಾಯಿತಿಗೆ ದಾನಪತ್ರ ನೊಂದಣಿ ಮಾಡಿಕೊಟ್ಟಿರುತ್ತಾರೆ ಹಾಗೂ ಎಲ್ಲಾ ನಿವೇಶನಗಳ ನಮೂನೆ–3ನ್ನು ಈ ಹಿಂದೆಯೇ ಪಟ್ಟಣ ಪಂಚಾಯಿತಿಯಿಂದ ನೀಡಲಾಗಿರುತ್ತದೆ, ಆದ್ದರಿಂದ ಸದರಿ ಬಡಾವಣೆಯಲ್ಲಿನ ನಿವೇಶನಗಳಲ್ಲಿ ವಸತಿ ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡಬೇಕೆಂದು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ದಿನಾಂಕ:24–09–2020 ರಂದು ನಡೆದ ಪ್ರಾಧಿಕಾರದ ಸಭೆಯಲ್ಲಿ ವಿಷಯಸಂಖ್ಯೆ(22)ರ ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳ ಸಂಖ್ಯೆ(ಅ) ರಲ್ಲಿ ಮಂಡಿಸಿ ಚರ್ಚಿಸಲಾಗಿದ್ದು, ಈ ಹಿಂದಿನ ಮುಖ್ಯಾಧಿಕಾರಿಗಳು ಪಟ್ಟಣಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಮಂಡಿಸಿ ನಿವೇಶನ ಬಿಡುಗಡೆ ಮಾಡಲು ಕ್ರಮವಹಿಸಿದ್ದು, ಬಡಾವಣೆಯಲ್ಲಿ ನಿವೇಶನ ಖರೀದಿಸಿರುವ ನಿವೇಶನಗಳ ಮಾಲೀಕರ ಹಿತದೃಷ್ಟಿಯನ್ನು ಪರಿಗಣಿಸಿ ನಿವೇಶನಗಳಲ್ಲಿ ವಸತಿ ಕಟ್ಟಡ ನಿರ್ಮಿಸಲು ಅನುಮೋದನೆ ನೀಡುವುದು ಸೂಕ್ತವೆಂದು ಸಭೆಯಲ್ಲಿ ಚರ್ಚಿಸಿ, ಸದರಿ ಬಡಾವಣೆಯಲ್ಲಿನ ನಿವೇಶನಗಲ್ಲಿ ಕಟ್ಟಡ ನಿರ್ಮಿಸಲು ತಾಂತ್ರಿಕ ಅನುಮೋದನೆ ನೀಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಗಿದೆ. ಅದರಂತೆ ಸದರಿ ಬಡಾವಣೆ ನಿವೇಶನಗಳಲ್ಲಿ ಕಟ್ಟಡ ನಿರ್ಮಿಸಲು ತಾಂತ್ರಿಕ ಅನುಮೋದನೆಯನ್ನು ನೀಡಲಾಗುತ್ತಿದೆ.

ಪ್ರಸ್ತುತ ಸದರಿ ಬಡಾವಣೆಯ ನಿವೇಶನ ಸಂಖ್ಯೆ 36 ರ 145.6 ಚ.ಮೀ ನಿವೇಶನದ ವಿಸ್ತೀರ್ಣ ತಿದ್ದುಪಡಿ ಮಾಡಿಕೊಡುವಂತೆ ಅರ್ಜಿದಾರರು ಕೋರಿದ್ದು, ಈ ಕಛೇರಿಗೆ ಅಫಿಡೆವಿಟ್ ಸಲ್ಲಿಸಿ, ನಿವೇಶನದ ಉತ್ತರ ದಿಕ್ಕಿಗೆ ಒತ್ತುವರಿಗೊಂಡಿರುವುದರಿಂದ ಬಡಾವಣೆ ಮಾಲೀಕರು ಕ್ರಯಪತ್ರದಲ್ಲಿ ಹಾಲಿ ಇರುವ ವಿಸ್ತೀರ್ಣಕ್ಕೆ ನಿವೇಶನವನ್ನು ನನಗೆ ಮಾರಾಟ ಮಾಡಿದ್ದು, ನಿ.ಸಂ. 36 ಅನ್ನು 112.41 ಚ.ಮೀ ವಿಸ್ತೀರ್ಣಕ್ಕೆ ತಿದ್ದುಪಡಿಮಾಡಿಕೊಡಬೇಕೆಂದು, ಈ ತಿದ್ದುಪಡಿಗೆ ಸ್ವಂತ ನಾನೇ ಜವಾಬ್ದಾರನಾಗಿರುತ್ತೇನೆಂದು ಅಥವಾ ಹೊಣೆಗರನಾಗಿರುತ್ತೇನೆ ಮತ್ತು ಕುಶಾಲನಗರ ಯೋಜನಾ ಪ್ರಾಧಿಕಾರವು ವಿಧಿಸಿರುವ ಷರತ್ತುಗಳ ಅನ್ವಯ ಮತ್ತು ನಿಭಂದನೆಗಳಿಗೆ ಬದ್ಧನಾಗಿರುತ್ತೇನೆಂದು, ಅನುಮೋದಿತ ನಕ್ಷೆಯ ಉಲ್ಲಂಘನೆಯಾದಂತಹ ಸಂದರ್ಭದಲ್ಲಿ ಸರ್ಕಾರವು ತೆಗೆದುಕೊಳ್ಳುವ ಕ್ರಮಗಳಿಗೆ ಬದ್ದನಾಗಿರುತ್ತೇನೆಂದು ಅಫಿಡೆವಿಟ್‌ನಲ್ಲಿ ಪ್ರಮಾಣೀಕರಿಸಿರುತ್ತಾರೆ. ವಿಷಯವನ್ನು ಸಭೆಯ ಚರ್ಚೆಗೆ ಮಂಡಿಸಿದೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಟಿಪ್ಪಣಿಯಲ್ಲಿ ವಿವರಿಸಿರುವಂತೆ ಸದರಿ ವಿನ್ಯಾಸ ನಕ್ಷೆಯನ್ನು ಬಡಾವಣೆಯ ಮಾಲೀಕರು ನಾಲ್ಕು ಬಾರಿ ಮಾರ್ಪಡಿಸಿಕೊಂಡಿರುತ್ತಾರೆ. ಮಾರ್ಪಡಿತ ನಕ್ಷೆ–4 ರಂತೆ ನಿವೇಶನದ ವಿಸ್ತೀರ್ಣವನ್ನು ತಿದ್ದುಪಡಿಮಾಡಿಕೊಡುವಂತೆ ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ, ದಿನಾಂಕ:21–12–2022 ರ ಕ್ರಯಪತ್ರದ ಪ್ರಕಾರ ಸದರಿ ನಿವೇಶನವನ್ನು ಈಗಾಗಲೇ ಆರು ಮಂದಿ ಮಾರಾಟಗಾರರು ಪ್ರಸ್ತುತ ಮಾಲೀಕರಿಗೆ ಮಾರಾಟ ಮಾಡಿರುತ್ತಾರೆ. ಸಲ್ಲಿಸಿರುವ ಕ್ರಯಪತ್ರದಲ್ಲಿ ನಿವೇಶನ ಸಂಖ್ಯೆ 36 ರ ಒಟ್ಟು 145.6 ಚ.ಮೀ ವಿಸ್ತೀರ್ಣದ ಪೈಕಿ 112.41 ಚ.ಮೀ ರಷ್ಟು ಮಾತ್ರ ಮಾರಾಟ ಮಾಡಿರುತ್ತಾರೆ. ಇದೇ ಕ್ರಯಪತ್ರವನ್ನು **"ಸ್ವಾಧೀನತೆಗೆ ಪೂಕರ ದಾಖಲೆಗಳು"** ಎಂದು ಪರಿಗಣಿಸಿ ಪುರಸಭೆಯಿಂದ ನಮೂನೆ–3 ಅನ್ನು ಅರ್ಜಿದಾರರಿಗೆ ದಿನಾಂಕ:05–05–2023 ರಂದು ಕ್ರಯಪತ್ರಕ್ಕೆ ವ್ಯತಿರಿಕ್ತವಾಗಿ ವಿತರಿಸಿರುವುದು ಕಂಡುಬಂದಿದೆ.

ಸದರಿ ನಿವೇಶನದ ವಿಸ್ತೀರ್ಣದ ನಿವೇಶನ ಬಿಡುಗಡೆ ಮಾಹಿತಿ ಪ್ರಾಧಿಕಾರದ ಕಛೇರಿಯಲ್ಲಿ ಲಭ್ಯವಿಲ್ಲದ ಕಾರಣ ಹಾಗೂ ಸದರಿ ಕ್ರಯಪತ್ರದನ್ವಯ ಮತ್ತು ಈಗಾಗಲೇ ದಿನಾಂಕ:05–05–2023ರಂದು ಮುಖ್ಯಾಧಿಕಾರಿಗಳು ಖಾತೆ ವಿತರಿಸಿರುವ ಕಾರಣ ಈ ಹಂತದಲ್ಲಿ ಪ್ರಾಧಿಕಾರದಿಂದ ವಿಸ್ತೀರ್ಣ ತಿದ್ದುಪಡಿಮಾಡಲು ಸಾಧ್ಯವಿರುವುದಿಲ್ಲವಾದ್ದರಿಂದ ಸದರಿ ಪ್ರಸ್ತಾವನೆಗೆ ಮುಖ್ಯಾಧಿಕಾರಿಗಳ ಹಂತದಲ್ಲೇ ಪರಿಶೀಲಿಸಬಹುದಾಗಿರುತ್ತದೆ. ವಿಷಯವನ್ನು ಸಭೆಗೆ ಮಂಡಿಸಿದೆ.

ನಿರ್ಣಯ: ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಸದರಿ ಬಡಾವಣೆಯ ನಿವೇಶನ ಬಿಡುಗಡೆ ಮಾಹಿತಿಯು ಪ್ರಾಧಿಕಾರದ ಕಛೇರಿಯಲ್ಲಿ ಲಭ್ಯವಿಲ್ಲದ ಕಾರಣ ಹಾಗೂ ಅರ್ಜಿದಾರರು ಸಲ್ಲಿಸಿರುವ ಕ್ರಯಪತ್ರದನ್ವಯ ಈಗಾಗಲೇ ಮುಖ್ಯಾಧಿಕಾರಿಗಳು ಖಾತೆ ವಿತರಿಸಿರುವ ಕಾರಣ, ಮುಖ್ಯಾಧಿಕಾರಿಗಳಿಗೆ ಪತ್ರ ಬರೆದು ಯಾವ ಆಧಾರದ ಮೇಲೆ ನಮೂನೆ–3 ಅನ್ನು ವಿತರಿಸಲಾಗಿದೆ ಎಂಬ ಬಗ್ಗೆ ಮಾಹಿತಿಯನ್ನು ಪಡೆಯಬೇಕೆಂದು ಸಭೆಯಲ್ಲಿ ಸದಸ್ಯಕಾರ್ಯದರ್ಶಿಯವರಿಗೆ ಸೂಚಿಸಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯಸಂಖ್ಯೆ(11): ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿರುವ ಪ್ರಸ್ತಾವನೆಗಳು:–

ದಿನಾಂಕ:17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಲ್ಲಿ **"0.20 ಸೆಂಟ್ಸ್ ವರೆಗಿನ ವಿಸ್ತೀರ್ಣಕ್ಕೆ ಏಕ–ನಿವೇಶನ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಸ್ವೀಕೃತವಾಗುವ ಪ್ರಸ್ತಾವನೆಗಳಿಗೆ ಮತ್ತು ನಿವೇಶನಗಳ ವಿಭಜನೆ/ಒಟ್ಟುಗೂಡಿಸುವಿಕೆಗೆ ಸಂಬಂಧಿಸಿದ ಕಡತಗಳನ್ನು ಪ್ರಾಧಿಕಾರದ ಅಧ್ಯಕ್ಷರಿಗೆ ಮಂಡಿಸಿ, ಕಡತದಲ್ಲಿ ಅನುಮೋದನೆ ಪಡೆದ ನಂತರ ಸದಸ್ಯ ಕಾರ್ಯದರ್ಶಿಗಳ ಹಂತದಲ್ಲಿ ಅನುಮೋದನೆ ನೀಡುವಂತೆ ಹಾಗೂ ಇಂತಹ ಪ್ರಕರಣಗಳನ್ನು**

ಮುಂದಿನ ಪ್ರಾಧಿಕಾರದ ಸಭೆಗೆ ಸ್ಥಿರೀಕರಣಕ್ಕಾಗಿ ಮಂಡಿಸಲು ಸದಸ್ಯ ಕಾರ್ಯದರ್ಶಿಗಳಿಗೆ ಅಧಿಕಾರ ಪ್ರತ್ಯಾಯೋಜಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಗಿರುತ್ತದೆ". ಅದರಂತೆ ಈ ಕೆಳಕಂಡ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲಾಗಿದ್ದು, ಸಭೆಯ ಸ್ಥಿರೀಕರಣಕ್ಕೆ ಮಂಡಿಸಿದೆ.

i. ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮುಳ್ಳುಸೋಗೆ ಗ್ರಾಮದ ಸ.ನಂ. 50/2 ರಲ್ಲಿ 0.08 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವ ಬಗ್ಗೆ (**ಅರ್ಜಿದಾರರು:– ಶ್ರೀ ಎಂ.ಡಿ. ನಾಗರಾಜು**).

ಟಿಪ್ಪಣಿ: ಸದರಿ ಜಮೀನಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ:

ಭೂಪರಿವರ್ತನೆ ಆದೇಶದ ವಿವರ: ಪ್ರಶ್ನಿತ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ಅಧಿಕೃತ ಜ್ಞಾಪನ ಪತ್ರ ಸಂ: 436947 ದಿನಾಂಕ: 10–04–2023 ರಲ್ಲಿ ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ.

ಮಹಾಯೋಜನೆಯನ್ವಯ ಜಮೀನಿನ ಭೂಉಪಯೋಗ: ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದೆ.

ರಸ್ತೆ ಸಂಪರ್ಕ: ಪ್ರಸ್ತಾವಿತ ಜಮೀನು ಪೂರ್ವ ದಿಕ್ಕಿನಲ್ಲಿ ಹಾಲಿ 9.0ಮೀ ಅಗಲದ ರಸ್ತೆಯಿಂದ ಸಂಪರ್ಕ ಹೊಂದಿದ್ದು, ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ ಇವರ ಪತ್ರ ಸಂ: ಪು.ಕು/328/2023–24 ದಿನಾಂಕ:24–01–2024 ರಲ್ಲಿ ಸದರಿ ಜಾಗಕ್ಕೆ ರಸ್ತೆ ಸಂಪರ್ಕ ಇರುತ್ತದೆ ಎಂಬುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ.

ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಅರ್ಜಿದಾರರು ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆ, ಇತ್ತೀಚಿನ ಇ.ಸಿ. ಪ್ರತಿ, ಇತ್ತೀಚಿನ ಆರ್.ಟಿ.ಸಿ, ಅಲಿನೇಷನ್ ನಕ್ಷೆ, ಕ್ರಯಪತ್ರ, ಆಧಾರ್‌ಕಾರ್ಡ್, ಮ್ಯುಟೇಷನ್ ರಿಜಿಸ್ಟರ್, ಅಫಿಡೆವಿಟ್, ಆಕಾರ್‌ಬಂದ್(ಉತಾರು) ಮತ್ತು ಗ್ರಾಮನಕ್ಷೆ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ

ಏಕ–ನಿವೇಶನ ನಕ್ಷೆ ಅನುಮೋದನೆ: ಪ್ರಶ್ನಿತ ಜಮೀನಿನ ಸ್ಥಳಪರಿಶೀಲನೆ ನಡೆಸಲಾಗಿದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆಯಂತೆ ವಿನ್ಯಾಸದಲ್ಲಿ ಎಲ್ಲೆ/ಸುತ್ತಳತೆಯನ್ನು ನಿಗಧಿಪಡಿಸಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿದ್ದು, ವಸತಿ ಉಪಯೋಗಕ್ಕಾಗಿ 322.259 ಚ.ಮೀ (ಶೇ. 100.0%) ವಿಸ್ತೀರ್ಣದ ಪ್ರದೇಶವನ್ನು ಕಾಯ್ದಿರಿಸಿ ದಿನಾಂಕ:17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ, ಮಹಾಯೋಜನೆ–2031 ರ ವಲಯ ನಿಯಮಾವಳಿಯ ಅಧ್ಯಾಯ 34(ಬಿ) ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರನ್ವಯ ಮುಳ್ಳುಸೋಗೆ ಗ್ರಾಮದ ಸ.ನಂ. 50/2 ರಲ್ಲಿ 0.08 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ದಿನಾಂಕ:06–02–2024 ರಂದು ತಾಂತ್ರಿಕ ಅನುಮೋದನೆಯನ್ನು ನೀಡಲಾಗಿದ್ದು, ಸಭೆಯ ಸ್ಥಿರೀಕರಣಕ್ಕಾಗಿ ಪ್ರಾಧಿಕಾರದ ಸಭೆಗೆ ಮಂಡಿಸಿದೆ.

ii. ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮುಳ್ಳುಸೋಗೆ ಗ್ರಾಮದ ಸ.ನಂ. 172/8 ರಲ್ಲಿ 0.03.50 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವ ಬಗ್ಗೆ (**ಅರ್ಜಿದಾರರು:– ಶ್ರೀ ಎಸ್. ಸತೀಶ್‌ಕುಮಾರ್**).

ಟಿಪ್ಪಣಿ: ಸದರಿ ಜಮೀನಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ:

ಭೂಪರಿವರ್ತನೆ ಆದೇಶದ ವಿವರ: ಪ್ರಶ್ನಿತ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ಅಧಿಕೃತ ಜ್ಞಾಪನ ಪತ್ರ ಸಂ: 329001 ದಿನಾಂಕ: 18–01–2023 ರಲ್ಲಿ ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ.

ಮಹಾಯೊಜನೆಯನ್ವಯ ಜಮೀನಿನ ಭೂಉಪಯೋಗ: ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದೆ.

ರಸ್ತೆ ಸಂಪರ್ಕ: ಪ್ರಸ್ತಾವಿತ ಜಮೀನು ಪೂರ್ವ ದಿಕ್ಕಿನಲ್ಲಿ ಹಾಲಿ 8.0ಮೀ ಅಗಲದ ರಸ್ತೆಗೆ ಲಗತ್ತಾಗಿದ್ದು, 9.0ಮೀ ಅಗಲಕ್ಕೆ ವಿಸ್ತರಿಸಲು ವಿನ್ಯಾಸ ನಕ್ಷೆಯಲ್ಲಿ ಪ್ರಸ್ತಾವಿಸಲಾಗಿದೆ. ಈ ಬಗ್ಗೆ ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ ಇವರು ಪತ್ರ ಸಂಖ್ಯೆ: ಪುರಸಭೆಕು/222/2023–24 ದಿನಾಂಕ: 06–01–2024 ರಲ್ಲಿ ದೃಢೀಕರಣ ಪತ್ರ ನೀಡಿರುತ್ತಾರೆ.

ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಅರ್ಜಿದಾರರು ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆ, ಕ್ರಯಪತ್ರ, ಮ್ಯುಟೇಷನ್ ರಿಜಿಸ್ಟರ್, ಇತ್ತೀಚಿನ ಆರ್.ಟಿ.ಸಿ, ಇತ್ತೀಚಿನ ಇ.ಸಿ. ಪ್ರತಿ, ನಮೂನೆ 11(ಇ) ನಕ್ಷೆ, ಕ್ರಯಪತ್ರ, ಆಧಾರ್‌ಕಾರ್ಡ್, ಆಕಾರ್ ಬಂದ್(ಉತಾರು), ಅಫಿಡೆವಿಟ್ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ

ಏಕ–ನಿವೇಶನ ನಕ್ಷೆ ಅನುಮೋದನೆ: ಪ್ರಶ್ನಿತ ಜಮೀನಿನ ಸ್ಥಳಪರಿಶೀಲನೆ ನಡೆಸಲಾಗಿದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆಯಂತೆ ವಿನ್ಯಾಸದಲ್ಲಿ ಎಲ್ಲೆ/ಸುತ್ತಳತೆಯನ್ನು ನಿಗಧಿಪಡಿಸಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿದ್ದು, ವಸತಿ ಉಪಯೋಗಕ್ಕಾಗಿ 137.42 ಚ.ಮೀ (ಶೇ. 97.04%) ಮತ್ತು ರಸ್ತೆ ವಿಸ್ತರಣೆಗಾಗಿ 04.18 ಚ.ಮೀ (ಶೇ. 2.96%) ವಿಸ್ತೀರ್ಣದ ಪ್ರದೇಶವನ್ನು ಕಾಯ್ದಿರಿಸಿ ದಿನಾಂಕ:17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ, ಮಹಾಯೋಜನೆ–2031 ರ ವಲಯ ನಿಯಮಾವಳಿಯ ಅಧ್ಯಾಯ 34(ಬಿ) ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರನ್ವಯ ಮುಳ್ಳುಸೋಗೆ ಗ್ರಾಮದ ಸ.ನಂ. 172/8 ರಲ್ಲಿ 0.03.50 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ದಿನಾಂಕ:08–02–2024 ರಂದು ತಾಂತ್ರಿಕ ಅನುಮೋದನೆಯನ್ನು ನೀಡಲಾಗಿದ್ದು, ಸಭೆಯ ಸ್ಥಿರೀಕರಣಕ್ಕಾಗಿ ಪ್ರಾಧಿಕಾರದ ಸಭೆಗೆ ಮಂಡಿಸಿದೆ.

ನಿರ್ಣಯ: ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ ಮೇಲ್ಕಾಣಿಸಿದ ಏಕ ನಿವೇಶನದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಈಗಾಗಲೇ ನಕ್ಷೆಗೆ ತಾಂತ್ರಿಕ ಅನುಮೋದನೆ ನೀಡಿರುವುದನ್ನು ಸಭೆಯು ಸರ್ವಾನುಮತದಿಂದ ಒಪ್ಪಿ ಸ್ಥಿರೀಕರಿಸಲಾಯಿತು.

ವಿಷಯಸಂಖ್ಯೆ(12): ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬಹುದಾದ ಇತರೆ ಹೆಚ್ಚುವರಿ ವಿಷಯಗಳು:

(ಅ): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಕೂಡ್ಲೂರು ಗ್ರಾಮದ ಸ.ನಂ. 58/1 ರಲ್ಲಿನ 0.32 ಎಕರೆ ಪೈಕಿ 0.10 ಎಕರೆ ವಾಣಿಜ್ಯ ಉದ್ದೇಶ ಹಾಗೂ 0.22 ಎಕರೆ ವಸತಿ ಉದ್ದೇಶ, ಸ.ನಂ. 58/6 ರಲ್ಲಿ 0.10 ಎಕರೆ, ಸ.ನಂ. 58/7 ರಲ್ಲಿ 0.32 ಎಕರೆ, ಸ.ನಂ. 58/8 ರಲ್ಲಿ 0.65 ಎಕರೆ ಒಟ್ಟು 1.39 ಎಕರೆ ವಿಸ್ತೀರ್ಣದ ಜಮೀನಿನ ವಾಣಿಜ್ಯ ಮತ್ತು ವಸತಿ ಉದ್ದೇಶದ **ಏಕ–ನಿವೇಶನ** ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿರುವ ಬಗ್ಗೆ (**ಅರ್ಜಿದಾರರು:– ಕೆ.ಕೆ. ಮಂಜುನಾಥ್ ಕುಮಾರ್**).

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಗ್ರಾಮಪಂಚಾಯಿತಿ ಇವರು ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿ, ಕೂಡ್ಲೂರು ಗ್ರಾಮದ ಸ.ನಂ. 58/1 ರಲ್ಲಿ 0.10 ಎಕರೆ, ಸ.ನಂ. 58/6 ರಲ್ಲಿ 0.10 ಎಕರೆ, ಸ.ನಂ. 58/7 ರಲ್ಲಿ 0.32 ಎಕರೆ, ಸ.ನಂ. 58/8 ರಲ್ಲಿ

0.65 ಎಕರೆ ಒಟ್ಟು 1.39 ಎಕರೆ ವಿಸ್ತೀರ್ಣದ ಜಮೀನುಗಳನ್ನು ಒಗ್ಗೂಡಿಸಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸದರಿ ಜಮೀನಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ:

ಭೂಪರಿವರ್ತನೆ ಆದೇಶದ ವಿವರ: ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ಪ್ರಶ್ನಿತ ಜಮೀನುಗಳನ್ನು ಕೆಳಕಂಡಂತೆ ಅಧಿಕೃತ ಜ್ಞಾಪನ ಪತ್ರಗಳಲ್ಲಿ ಭೂಪರಿವರ್ತಿಸಿ ಆದೇಶಿಸಿರುತ್ತಾರೆ.

ಕ್ರ. ಸಂ.	ಪ್ರಸ್ತಾವನೆ ಸಲ್ಲಿಸಿರುವ ಜಮೀನಿನ ವಿವರ	ಅಧಿಕೃತ ಜ್ಞಾಪನ ಪತ್ರ ಸಂಖ್ಯೆ:	ಉದ್ದೇಶ
1	ಕೂಡ್ಲೂರು ಗ್ರಾಮ ಸ.ನಂ. 58/6 ರಲ್ಲಿ 0.65 ಎಕರೆ	ಭೂಪರಿ/250/2009–10 ದಿನಾಂಕ: 25–11–2009	ಒಟ್ಟು 0.65 ಎಕರೆ ವಾಣಿಜ್ಯ ಉದ್ದೇಶಕ್ಕಾಗಿ ಭೂಪರಿವರ್ತಿಸಿ ಆದೇಶಿಸಲಾಗಿದೆ.
2	ಕೂಡ್ಲೂರು ಗ್ರಾಮ ಸ.ನಂ. 58/1 ರಲ್ಲಿ 0.32 ಎಕರೆ	ಭೂಪರಿ/03/2011–12 ದಿನಾಂಕ: 18–05–2011	0.32 ಎಕರೆ ಪೈಕಿ 0.10 ಎಕರೆ ವಾಣಿಜ್ಯ ಉದ್ದೇಶಕ್ಕಾಗಿ ಮತ್ತು 0.22 ಎಕರೆ ವಸತಿ ಉದ್ದೇಶಕ್ಕಾಗಿ ಭೂಪರಿವರ್ತಿಸಿ ಆದೇಶಿಸಲಾಗಿದೆ.
3	ಕೂಡ್ಲೂರು ಗ್ರಾಮ ಸ.ನಂ. 58/6 ರಲ್ಲಿ 0.10 ಎಕರೆ	541633 ದಿನಾಂಕ: 08–12–2023	0.10 ಎಕರೆ ಜಮೀನನ್ನು ವಾಣಿಜ್ಯ (ರೆಸಾರ್ಟ್) ಉದ್ದೇಶಕ್ಕೆ ಭೂಪರಿವರ್ತಿಸಿ ಆದೇಶಿಸಿರುತ್ತಾರೆ.
4	ಕೂಡ್ಲೂರು ಗ್ರಾಮ ಸ.ನಂ. 58/7 ರಲ್ಲಿ 0.32 ಎಕರೆ	536990 ದಿನಾಂಕ: 01–02–2024	0.32 ಎಕರೆ ಜಮೀನನ್ನು ವಾಣಿಜ್ಯ (ರೆಸಾರ್ಟ್) ಉದ್ದೇಶಕ್ಕೆ ಭೂಪರಿವರ್ತಿಸಿ ಆದೇಶಿಸಿರುತ್ತಾರೆ.

ಮಹಾಯೋಜನೆಯನ್ವಯ ಜಮೀನಿನ ಭೂಉಪಯೋಗ: ಪ್ರಶ್ನಿತ ಜಮೀನುಗಳು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಾಣಿಜ್ಯ ವಲಯದಲ್ಲಿದೆ.

ರಸ್ತೆ ಸಂಪರ್ಕ: ಸ.ನಂ. 58/7 ರ ಜಮೀನು ಪೂರ್ವ ದಿಕ್ಕಿನಲ್ಲಿ 4.0ಮೀ ಅಗಲದ ರಸ್ತೆ ಸಂಪರ್ಕ ಇದ್ದು, 12.0ಮೀ ಅಗಲಕ್ಕೆ ವಿಸ್ತರಿಸಲು ಪ್ರಸ್ತಾಪಿಸಿದೆ.

ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆ, ಆಕಾರ್ ಬಂದ್(ಉತಾರು), ಉತ್ತಾರು ನಕ್ಷೆ, ಪ್ರಶ್ನಿತ ಜಮೀನುಗಳ ದಾನಪತ್ರ, ಸ್ಥಿರಾಸ್ಥಿಯ ಕ್ರಯಸಾಧನ, ವಿಭಾಗಪತ್ರ, ಆರ್.ಟಿ.ಸಿ ಪ್ರತಿಗಳು, ಮ್ಯುಟೇಷನ್ ಪ್ರತಿಗಳು, ಇತ್ತೀಚಿನ ಇ.ಸಿ. ಪ್ರತಿಗಳು, ಆಧಾರ್‌ಕಾರ್ಡ್, ಗ್ರಾಮನಕ್ಷೆ, ದಾಖಲಾತಿಗಳನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ.

ಅರ್ಜಿದಾರರು ಕರಡು ವಿನ್ಯಾಸ ನಕ್ಷೆಯನ್ನು ಸಲ್ಲಿಸಿದ್ದು, ಕರಡು ವಿನ್ಯಾಸ ನಕ್ಷೆಯಲ್ಲಿ ಈ ಕೆಳಕಂಡಂತೆ ಭೂಉಪಯೋಗಗಳನ್ನು ನಿಗಧಿಪಡಿಸಿರುತ್ತಾರೆ.

ವಾಣಿಜ್ಯ ಭೂಉಪಯೋಗ ವಿಶ್ಲೇಷಣೆ			
ಕ್ರ. ಸಂ	ಭೂಉಪಯೋಗ	ವಿಸ್ತೀರ್ಣ (ಚ.ಮೀ ಗಳಲ್ಲಿ)	ಶೇಕಡ (%)
1	ವಾಣಿಜ್ಯ	4020.22	84.92
2	ವಾಹನ ನಿಲುಗಡೆ	239.34	5.05
3	ಉದ್ಯಾನವನ	474.74	10.03
	ಒಟ್ಟು	4734.30	100.00

ವಸತಿ ಭೂಉಪಯೋಗ			
ಕ್ರ. ಸಂ	ಭೂಉಪಯೋಗ	ವಿಸ್ತೀರ್ಣ	ಶೇಕಡ (%)
1	ವಸತಿಗಾಗಿ	890.30 ಚ.ಮೀ	100.00
	ಒಟ್ಟು	4734.30 ಚ.ಮೀ	100.00

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಕೂಡ್ಲೂರು ಗ್ರಾಮ ಸ.ನಂ. 58/1 ರಲ್ಲಿ 0.32 ಎಕರೆ ಪೈಕಿ 0.10 ಎಕರೆ ವಾಣಿಜ್ಯ ಉದ್ದೇಶಕ್ಕಾಗಿ ಮತ್ತು 0.22 ಎಕರೆ ವಸತಿ ಉದ್ದೇಶಕ್ಕಾಗಿ ಮಾನ್ಯ ಜಿಲ್ಲಾಧಿಕಾರಿಗಳು ದಿನಾಂಕ: 18–

05–2011 ರಲ್ಲಿ ಆದೇಶ ಸಂಖ್ಯೆ: ಭೂಪರಿ/03/2011–12 ಭೂಪರಿವರ್ತಿಸಿ ಆದೇಶಿಸಲಾಗಿದೆ. ಆದರೆ ಅರ್ಜಿದಾರರು ಈ ಕಚೇರಿಯಿಂದ ಸ.ನಂ. 58/1 ರಲ್ಲಿ ಒಟ್ಟು 0.32 ಎಕರೆ ಜಮೀನಿಗೆ ವಸತಿ ಉದ್ದೇಶದ ಏಕನಿವೇಶನ ನಕ್ಷೆಗೆ ಈಗಾಗಲೇ ಅನುಮೋದನೆ ಪಡೆದಿರುತ್ತಾರೆ. ಆದ್ದರಿಂದ ಕೂಡುಮಂಗಳೂರು ಗ್ರಾಮಪಂಚಾಯಿತಿಯಲ್ಲಿ ಸದರಿ ಸ.ನಂ. 58/1 ರಲ್ಲಿ ಎಷ್ಟು ವಿಸ್ತೀರ್ಣಕ್ಕೆ ಖಾತೆಗಳನ್ನು ವಿತರಿಸಿರುತ್ತಾರೆ ಎಂಬುದರ ಬಗ್ಗೆ ಪರಿಶೀಲಿಸುವುದು ಸೂಕ್ತವಾಗಿರುತ್ತದೆ. ಅಲ್ಲದೆ, ಸ.ನಂ. 58/1, ಸ.ನಂ.58/6, ಸ.ನಂ. 58/7 ಹಾಗೂ ಸ.ನಂ. 58/8 ರ RTC ಯಲ್ಲಿ ವಿವಿಧ ಇಲಾಖೆಗಳಿಂದ ಆಧಾರ/ ಸಾಲ ಪಡೆದಿದ್ದು, ಸದರಿ ಇಲಾಖೆಗಳಿಂದ ಸದರಿ ಪ್ರಸ್ತಾವನೆಗೆ ವಸತಿ ಮತ್ತು ವಾಣಿಜ್ಯ ಉದ್ದೇಶದ ಏಕನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಯಾವುದೇ ಆಕ್ಷೇಪಣೆ ಇಲ್ಲದಿರುವ ಬಗ್ಗೆ ನಿರಾಕ್ಷೇಪಣಾ ಪತ್ರ ಪಡೆಯುವುದು ಸೂಕ್ತವಾಗಿರುತ್ತದೆ.

ನಿರ್ಣಯ: ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಸ.ನಂ. 58/1 ರಲ್ಲಿ 0.32 ಎಕರೆ ಪೈಕಿ 0.10 ಎಕರೆ ವಾಣಿಜ್ಯ ಉದ್ದೇಶಕ್ಕಾಗಿ ಮತ್ತು 0.22 ಎಕರೆ ವಸತಿ ಉದ್ದೇಶಕ್ಕಾಗಿ ಮಾನ್ಯ ಜಿಲ್ಲಾಧಿಕಾರಿಗಳು ಭೂಪರಿವರ್ತಿಸಿ ಆದೇಶಿಸಿದ್ದು, ಅರ್ಜಿದಾರರು ಈ ಕಚೇರಿಯಿಂದ 0.32 ಎಕರೆ ಜಮೀನಿಗೆ ವಸತಿ ಏಕ–ನಿವೇಶನ ನಕ್ಷೆಗೆ ಈಗಾಗಲೇ ಅನುಮೋದನೆ ಪಡೆದಿರುವುದರಿಂದ ಕೂಡುಮಂಗಳೂರು ಗ್ರಾಮಪಂಚಾಯಿತಿಯಲ್ಲಿ ಸದರಿ ಸ.ನಂ. 58/1 ರಲ್ಲಿ ಎಷ್ಟು ವಿಸ್ತೀರ್ಣಕ್ಕೆ ಖಾತೆಗಳನ್ನು ವಿತರಿಸಿರುತ್ತಾರೆ ಎಂಬುದರ ಬಗ್ಗೆ ಪರಿಶೀಲಿಸಿಕೊಂಡು ಮತ್ತು ಸ.ನಂ. 58/1, ಸ.ನಂ.58/6, ಸ.ನಂ. 58/7 ಹಾಗೂ ಸ.ನಂ. 58/8 ರ RTC ಯಲ್ಲಿ ವಿವಿಧ ಇಲಾಖೆಗಳಿಂದ ಆಧಾರ/ ಸಾಲ ಪಡೆದಿರುವುದರಿಂದ ಅರ್ಜಿದಾರರು ಸದರಿ ಇಲಾಖೆಗಳಿಂದ ವಸತಿ ಮತ್ತು ವಾಣಿಜ್ಯ ಉದ್ದೇಶದ ಏಕನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಯಾವುದೇ ಆಕ್ಷೇಪಣೆ ಇಲ್ಲದಿರುವ ಬಗ್ಗೆ ನಿರಾಕ್ಷೇಪಣಾ ಪತ್ರವನ್ನು ಪಡೆದು ಈ ಕಛೇರಿಗೆ ಸಲ್ಲಿಸಿದ್ದಲ್ಲಿ, ಸದರಿ ಯೋಜನೆಯನ್ನು ರೇರಾ ಪ್ರಾಧಿಕಾರದಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಸುವ ಷರತ್ತಿಗೊಳಪಡಿಸಿ, ಸದರಿ ಪ್ರಸ್ತಾವನೆಗೆ ಅನುಮೋದನೆ ನೀಡಬಹುದಾಗಿದೆ ಎಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು

ಸಹಿ/–	ಸಹಿ/–
ಸದಸ್ಯ ಕಾರ್ಯದರ್ಶಿ	ಅಧ್ಯಕ್ಷರು
ಕುಶಾಲನಗರ ಯೋಜನಾ ಪ್ರಾಧಿಕಾರ	ಕುಶಾಲನಗರ ಯೋಜನಾ ಪ್ರಾಧಿಕಾರ
ಕುಶಾಲನಗರ	ಕುಶಾಲನಗರ